(MR. SPEAKER)

published under a wrong rule, that if this Bill is to be introduced, it becomes infructuous, who is to bear the loss and so on. What is now sought is not the consideration or the passing of a Bill somebody wants to bring a Bill.

Sri ANGADI CHANNABASAPPA.—Where is the hurry for introduction?

Mr. SPEAKER.—The question of time and hurry does not come under a point of order. If they are entitled to introduce, they are entitled to do so, whether leisurely or hurriedly.

Sri ANGADI CHANNABASAPPA.—For one and the same purpose, could there be several Bills?

Mr. SPEAKER.—Introduction stage is something different.

Sri S. NIJALINGAPPA.—I beg to introduce the Mysore Parliamentary Secretaries Allowances Bill, 1963, which has been published in the Mysore Gazette Extraordinary dated 8th April 1963 under rule 64 of the Rules of Procedure and Conduct of Business in the Legislative Assembly.

Mr. SPEAKER.—The Mysore Parliamentary Secretaries Allowances Bill, 1963 is introduced.

MYSORE MUNICIPALITIES BILL, 1962.

Motion to Consider

(Debate continued)

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಸ್ವಾಮಿ, ಸ್ಥಳೀಯ ಸಂಸ್ಥೆಗಳ ವಿಧೇಯಕದ ಮೇಲೆ ನಿನ್ನೆ ಮಾತನಾಡುತ್ತಾ ಸರಕಾರ ಎಲ್ಲೆಲ್ಲಿ ತನಗೆ ಸಾಧ್ಯವೋ ಅಲ್ಲೆಲ್ಲಾ ಕೈ ಹಾಕಬೇಕು, ಸ್ಥಳೀಯ ಸಂಸ್ಥೆಗಳ ಕೆಲಸ ಕಾರ್ಯಗಳನ್ನು ಕುಂಠಿತಪಡಿಸಬೇಕು, ತಮಗೇ ಆಗದೇ ಇದ್ದವರ ಕ್ಷೇತ್ರದಲ್ಲಿ ತಮಗೆ ಅನುಕೂಲ ಆಗುವ ರೀತಿಯಲ್ಲಿ ಕೆಲವು ಕಲಮುಗಳನ್ನು ಈ ವಿಧೇಯಕದಲ್ಲಿ ಇಟ್ಟುಕೊಂಡಿದ್ದೀರಿ ಎಂದು ನಾನು ನೆನ್ನೆ ಇಲ್ಲಿ ಮಾತನಾಡುತ್ತಾ ಹೇಳಿದೆ. ವೋಟಿನಪಟ್ಟಿ ತಯಾರಾದ ಮೇಲೆ ಯಾವ ರೀತಿ ಚುನಾವಣೆ ಮಾಡಬೇಕು ಎನ್ನುವುದನ್ನು ಇಲ್ಲಿ ಹೇಳಿದ್ದಾರೆ. ಅದರಂತೆ ಒಬ್ಬ ವೋಟುದಾರ ಚುನಾವಣೆಗೆ ಹೋಗಿ ಗೆದ್ದು ಬಂದರೆಂದು ತಿಳಿದುಕೊಳ್ಳೋಣ, ಆ ರೀತಿ ಗೆದ್ದು ಬಂದ ವ್ಯಕ್ತಿ ಮುನಿಸಿಪಲ್ ಕೌನ್ಸಿಲರಾಗಿ ಅನಂತರ ಪ್ರೆಸಿಡೆಂಟು ಆದರು ಎಂದು ಇಟ್ಟುಕೊಳ್ಳೋಣ ಅಂತಹವರು ತಮಗೆ ಆಗದವರು ಎಂದುಕೊಂಡು ಬಂದಾಗ ಏನಾದರೂ ಅವ್ಯವಸ್ಥೆ ಮಾಡಿ ಅವರನ್ನು ಅಧಿಕಾರದಿಂದ ತೆಗೆದು ಹಾಕಲು ಅನುಕೂಲವಾಗುವಂತೆ ಅಧಿಕಾರವನ್ನು ಸರ್ಕಾರ ತನ್ನ ಕೈಲಿಟ್ಟುಕೊಳ್ಳಲು ಪ್ರಯತ್ನ ಮಾಡಿದೆ ಎಂಬುದು ಈ ಕ್ಲಾಜನ್ನು ಓದಿ ನೋಡಿದರೆ ತಮಗೇ ಅರ್ಥವಾಗುತ್ತದೆ. ತಾವು ಇಷ್ಟು ದೂರ ಮನಸ್ಸಿನಲ್ಲಿ ಏನೇನೋ ವಿಷಯಗಳನ್ನು ಇಟ್ಟುಕೊಂಡು ಹೇಗಾದರೂ ಮಾಡಿ ಇಂತಹವರನ್ನು ಅಧಿಕಾರದಿಂದ ಕಿತ್ತು ಹಾಕಬೇಕೆಂಬ ಅಭಿಪ್ರಾಯದಿಂದಲ್ಲವೇ ಇಲ್ಲಿ ತಾವು ಈ ರೀತಿ ತೋರಿಸಿರುವುದು? ತಾವೆಲ್ಲ ಖ್ಯಾತಿವೆತ್ತ ವಕೀಲರೂ ವಯೋವೃದ್ಧರೂ ಆಗಿರುವವರು ಮುಂದೆ ಹೈಕೋರ್ಟಿನಲ್ಲಿ, ಸುಪ್ರೀಂಕೋರ್ಟಿನಲ್ಲಿ ನ್ಯಾಯಾಧೀಶರಾಗಿ ಹೋಗಲು ಅರ್ಹರಾದವರು, ಹೀಗೇಕೆ ಮಾಡಿದ್ದೀರಿ. ನಾನೇನೋ ಎಜುಕೇಷನಲಿ ಬ್ಯಾಕ್‌ವರ್ಡ್.

ಶ್ರೀ ಎಂ. ವಿ. ಕೃಷ್ಣಪ್ಪ (ಕಂದಾಯ ಶಾಖೆಯ ಮಂತ್ರಿಗಳು).—ನೀವು ಮಂತ್ರಿಗಳಾಗುವವರು. (ನಗು).

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಾನು ಮಂತ್ರೀನೂ ಆಗುವುದಿಲ್ಲ. ಮತ್ತು ಅವರ ಬಾಜಾ ಬಜಂತ್ರಿ ಕೆಲಸಗಳನ್ನು ಮಾಡುವುದಿಲ್ಲ. ಅದನ್ನೆಲ್ಲಾ ನಿಮಗೇ ಬಿಟ್ಟು ಬಿಡುತ್ತೇನೆ ? (ನಗು). ಇದರಲ್ಲಿರುವ Section (42) (10)ನ್ನು ನೋಡಿ—

"(1) Every President and Vice-President, shall after an opportunity is afforded for hearing him, be removable from his office as such President or Vice-President by the Government for misconduct in the discharge of his duties or for neglect of or incapacity to perform his duties or if he is unable to pay his debts and a president and Vice-president so removed shall not be eligible for re-election as President or Vice-President during the remainder of the term of office of Councillors specified in Section 39."

ಒಂದು ಅರೆಸ್ಟು ವಾರೆಂಟು ಒಬ್ಬ ಪ್ರೆಸಿಡೆಂಟರ ಮೇಲೆ ಜಾರಿಯಾಗುತ್ತದೆ. ಅವರನ್ನು ಕೋರ್ಟಿನಲ್ಲಿ ತೆಗೆದುಕೊಂಡು ಹೋಗಿ ಬಿಡುತ್ತಾರೆ. ಅನಂತರ ಅವರನ್ನು Explanationನಲ್ಲಿ ಕೊಟ್ಟಿರುವಂತೆ

"Under Arrest" ಎಂದರೇನು ? ತಾವು ವಕೀಲರಾಗಿರುವುದರಿಂದ ತಮಗೆ ನಾಳೆ ಇದರ ಬಗ್ಗೆ ವಕಾಲತ್ತು ಕೊಟ್ಟರೆ ಇದು ಕಾನೂನಿಗೆ ವಿರೋಧ ಎಂದು ತಾವು ಹೇಳುವುದಿಲ್ಲವೆ ? ಈ ದೃಷ್ಟಿಯಿಂದ Section (42) (10)ರಲ್ಲಿ ಹೇಳಿರತಕ್ಕದ್ದು ಸರಿಯಲ್ಲ.

MR. SPEAKER.—That is only a presumption.

SRI C. J. MUCKANNAPPA.—Presumption may lead to so many dangers. Let us not keep an explanation like this and tomorrow make use of it for somebody's benefit.

ಇದನ್ನು ಸುದೀರ್ಘವಾಗಿ ಯೋಚನೆ ಮಾಡಬೇಕೆಂದು ಸರಕಾರವನ್ನು ಕೇಳಿಕೊಳ್ಳುತ್ತೇನೆ. ಅಲ್ಲದೆ ಈ ಬಿಲ್ಲನ್ನು ಡ್ರೈಸ್ಟ್ ಮಾಡಲು ಖ್ಯಾತಿವೆತ್ತ ವಕೀಲರುಗಳಾದ ಮಾನ್ಯ ಮಂತ್ರಿಗಳೂ ಹಾಗೂ ಉಪಮಂತ್ರಿಗಳೂ ಇದನ್ನು ನ್ಯಾಯವಾಗಿ ಪರಿಶೀಲಿಸುವರೆಂದು ನಾನು ತಿಳಿದುಕೊಂಡಿದ್ದೇನೆ.

ಇದರೊಳಗೆ Functions of the President and Vice-President ಏನು ಎಂಬುದನ್ನು ಹೇಳಿದ್ದಾರೆ. ತಾಲ್ಲೂಕ್ ಡೆವಲಪ್‌ಮೆಂಟ್ ಬೋರ್ಡ್ ಕಾನೂನಿನಲ್ಲಿಯೂ ಹೀಗೆ ಇದೆ. ಆ ಬೋರ್ಡಿನವರು ಪ್ರತಿಯೊಂದಕ್ಕೂ ಸರಕಾರಕ್ಕೆ ಬರೆಯಬೇಕು. ಅನಂತರ ಅವರ ಅನುಮತಿ ಪಡೆಯಬೇಕು. ಅವರೇನು ಕಾರ್ಯಕ್ರಮ ತೆಗೆದುಕೊಳ್ಳಬೇಕಾದರೂ ಲೋಕಲ್ ಬೋರ್ಡು ಆಕ್ಟಿನ ಪ್ರಕಾರ ಹೋಗತಕ್ಕದ್ದಾಗಿದೆ. ದರಿಂದ ಈ ಕಾನೂನಿನಲ್ಲಿಯೂ ಏಕಿರಬಾರದು ? Section 43ರಲ್ಲಿ ಸರಕಾರ ಇಂತಿಂತಹ ಅಧಿಕಾರವನ್ನು ಇಟ್ಟುಕೊಂಡಿದೆ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಅವರ ಮೇಲೆ ಆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುವ ಅಧಿಕಾರವನ್ನು ಸರಕಾರ ಇಟ್ಟುಕೊಳ್ಳುವುದು ಸರಿಯಲ್ಲ. ಕಾನೂನು ಮಾಡುವಾಗ ಈ ರೀತಿ ಮಾಡಬಾರದು. ಇದನ್ನು ಕಂಪ್ಲೀಟ್ ಆಗಿ Delete ಮಾಡಬೇಕೆಂದು ಸರಕಾರಕ್ಕೆ ಹೇಳುತ್ತೇನೆ.

ಇನ್ನು Section 45ರಲ್ಲಿ ಹೇಗಿದೆ ಎಂದರೆ, ಯಾರಾದರೂ ಮೊದಲನೇ ಸಾರ್ತಿಗೆ ಹೊಸದಾಗಿ ಚುನಾವಣೆಯಾಗಿ ಬಂದ ಪ್ರೆಸಿಡೆಂಟರು Democratic set upನಲ್ಲಿ ಕೆಲಸ ಮಾಡುವಾಗ ಪ್ರಪಂಚದಲ್ಲಿ ಎಲ್ಲಿಯೂ ಇಲ್ಲದೇ ಇರತಕ್ಕ ನಿಯಮಗಳನ್ನು ಇಲ್ಲೇಕೆ ಹಾಕುತ್ತೀರಿ ? Section 45 (3)ರಲ್ಲಿ ಹೀಗೆ ಹೇಳಿದೆ—

"Section 45 Penalty for refusal to hand over charge to new President or Vice-President :

(3) If the retiring President or Vice-President or the President or Vice-President removed under sub-section (10) of

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

section 42 to whom a direction has been issued under sub-section (2) does not comply with such direction, he shall, on conviction, be punished with simple imprisonment for a term which may extend to one month or with fine which may extend to five hundred rupees or with both."

ಇದು ಏನು ಸ್ವಾಮಿ ? ನಾಗರೀಕ ರಾಜ್ಯದಲ್ಲಿ ಇಂಥ ವಿಷಯ ಇರಬೇಕೇ ? ಅಂಥವನನ್ನು ಕತ್ತು ಹಿಡಿದು ಹೊರಗೆ ಹಾಕಬೇಕು. ಕೋರ್ಟಿಗೆ ತೆಗೆದುಕೊಂಡು ಹೋಗುವುದು ಸರಿಯಲ್ಲ, ಇದನ್ನು ಸ್ವಲ್ಪ ಯೋಚನೆ ಮಾಡಬೇಕು ಎಂದು ಹೇಳುತ್ತೇನೆ.

ಶ್ರೀ ಕೆ. ಪುಟ್ಟಸ್ವಾಮಿ (ನಗರಾಡಳಿತ ಶಾಖೆಯ ಮಂತ್ರಿಗಳು).—ಅವರು ಹೇಳುವ ಹಾಗೆ ಕತ್ತು ಹಿಡಿದು ಹೊರಗೆ ಹಾಕುವುದು ನಮಗೆ ಆಗುವದಿಲ್ಲ, ಕೋರ್ಟಿಗೆ ಬೇಕಾದರೆ ಹೋಗುತ್ತೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಾನು ಹೇಳುವುದು ಇಷ್ಟೇ: ನಿಮ್ಮ ಕಾಲದಲ್ಲಿ ಇಂಥ ಶಾಸನ ಆಗಬಾರದು ಇಂಥ ಶಾಸನ ಮಾಡಿದರೆ ನಿಮಗೆ ಅಪಕೀರ್ತಿ ಬರುತ್ತದೆ. ಆದುದರಿಂದ ಸೆಲೆಕ್ಟ್ ಕಮಿಟಿಯಲ್ಲಿ ಇದನ್ನು ಸುದೀರ್ಘವಾಗಿ ಯೋಚನೆ ಮಾಡಬೇಕು ಎಂದು ಸರಕಾರಕ್ಕೆ ಸೂಚನೆ ಮಾಡುತ್ತೇನೆ.

Section 48—.Place of holding meetings and maintenance of order thereat. Place of holding meetings ಅಂದರೆ ಮುನಿಸಿಪಲ್ ಆಫೀಸಿನಲ್ಲಿ ಇಷ್ಟು ಹೊತ್ತಿಗೆ ಈ ಕಾರ್ಯಕ್ರಮಕ್ಕಾಗಿ ಸಭೆ ಸೇರುತ್ತದೆ. ಎಂದು ಇರಬೇಕು. ಎಲ್ಲಿ ಬೇಕಾದಲ್ಲಿ ಮೀಟಿಂಗ್ ಮಾಡಲು ಅವಕಾಶವಿರಕೂಡದು. ಮುನಿಸಿಪಲ್ ಬಿಲ್ಡಿಂಗ್‌ನಲ್ಲಿಯೇ ಮೀಟಿಂಗ್ ನಡೆಯಬೇಕು. ಬೇರೆ ಕಡೆ ಮಾಡಲು ಕೊಟ್ಟರೆ ಮುನಿಸಿಪಾಲಿಟಿ ಕೆಟ್ಟು ಹೋಗುತ್ತದೆ. ಇದಲ್ಲದೆ ಹಣ ಕಾಸಿನ ವಿಷಯದಲ್ಲಿ ಶ್ರದ್ಧೆವಹಿಸಬೇಕು. ಕಂಟ್ರೋಲ್ ಸರಿಯಾಗಿ ಮಾಡಬೇಕು. ಆದುದರಿಂದ ಸೆಲೆಕ್ಟ್ ಕಮಿಟಿಯಲ್ಲಿ ಈ ಕಲಮಿನ ಬಗ್ಗೆ ಸುದೀರ್ಘವಾಗಿ ಯೋಚನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

Section 53 Minutes of Proceedings. ಕನ್ನಡದಲ್ಲಿ ಇಡಬೇಕೆಂದು ಇಲ್ಲಿ ಹೇಳಿದೆ. ಈ ವಿಧಾನಸಭೆಯಲ್ಲಿಯೇ ವಿಧೇಯಕಗಳನ್ನು ಕನ್ನಡದಲ್ಲಿ ಮುದ್ರಿಸಿ ಕೊಡುವದಕ್ಕಾಗುವದಿಲ್ಲ. ಅಂದಮೇಲೆ ಮುನಿಸಿಪಾಲಿಟಿಯಲ್ಲಿ ಪ್ರೊಸೀಡಿಂಗ್ಸ್ ಕನ್ನಡದಲ್ಲಿ ಹೇಗೆ ಇಡುವುದು ? ಕನ್ನಡ ಇಂಗ್ಲೀಷ್ ಬಾರದೇ ಇದ್ದ ಪ್ರೆಸಿಡೆಂಟ್ ಆಗಿದ್ದರೆ ಏನು ಮಾಡುವುದು ? ಇಂಗ್ರೇಜಿ, ಕನ್ನಡ ಬಾರದೆ ಉರ್ದು ಬರತಕ್ಕ ಪ್ರೆಸಿಡೆಂಟರು ಇದ್ದುದನ್ನು ನಾನು ನೋಡಿದ್ದೇನೆ. ಇದಲ್ಲದೆ ಕೆಲವರು ಮರಾಠಿ ಜನರು ಮರಾಠಿ ಭಾಷೆಯಲ್ಲಿ ಬರೆಯಬೇಕು ಎಂದು ಕೇಳಬಹುದು. ಈ ರೀತಿಯಾದರೆ ಪ್ರೊಸೀಡಿಂಗ್ಸ್ ಬರೆಯುವುದು ಹೇಗೆ ? ಆದುದರಿಂದ ಸರಕಾರ ಇದನ್ನು ಸುದೀರ್ಘವಾಗಿ ಯೋಚನೆ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಹೊಸ ಕಾನೂನು ಮಾಡುವಾಗ್ಗೆ ಹಿಂದಿನ ಅನುಭವ ಗಣನೆಗೆ ತೆಗೆದುಕೊಳ್ಳಬೇಕು. ಬೇರೆ ಭಾಷೆ ಬರದೆ ಉರ್ದು ಬರತಕ್ಕ ಪ್ರೆಸಿಡೆಂಟರು ಸಿರಾದಲ್ಲಿ ಹಿಂದೊಮ್ಮೆ ಇದ್ದರು, "ಕ್ಯಾ ಕರ್ನಾ ಕನಡೀ ನಹಿ ಆತೀ, ಧೇಟಾ ನಹಿ ಬಡಾ ಸಹಿ" ಎಂದು ಎನ್ನುತ್ತಿದ್ದರು ಇಂಥ ಸಂದರ್ಭದಲ್ಲಿ ತೊಂದರೆಯಾಗುತ್ತದೆ. ಆದ್ದರಿಂದ ಪ್ರೊಸೀಡಿಂಗ್ಸ್ ಹೇಗೆ ಇರಬೇಕು ಎನ್ನುವದನ್ನು ಸ್ವಲ್ಪ ಯೋಚನೆ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

Section 55. Adjournment of meetings, ಸ್ವಾಮಿ, ನಾನು 16–17 ವರ್ಷ ಮುನಿಸಿಪಲ್ ಕೌನ್ಸಿಲರ್ ಆಗಿದ್ದೆ. ಚೆನ್ನಾಗಿ ಅನುಭವವಿದೆ. Adjourned meeting ಎಂಬುದಕ್ಕೆ ಸರಿಯಾಗಿ ಅರ್ಥ ಬರುವ ಹಾಗೆ ವಿವರಣೆ ಇರಬೇಕು. ಅಂದರೆ ಸರಿಯಾಗಿ ಆಗುತ್ತದೆ. ಇದನ್ನು ಯೋಚನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

56. Modification and cancellation of resolutions : "No resolution of a municipal council shall be modified or cancelled within three months after the passing thereof" ಎಂದಿದೆ. ಮೂರು ತಿಂಗಳು ಕಾಲ ಏತಕ್ಕೆ ಇಟ್ಟಿದ್ದೀರಿ ? ಅದನ್ನು ಆರು ತಿಂಗಳು ಎಂದು ಇಟ್ಟರೆ ತಪ್ಪಾಗುವುದಿಲ್ಲ. ಇದಕ್ಕೆ ಶೇಕಡ 50 ರಷ್ಟು ಮತಬೇಕು

ಎಂದು ಇಟ್ಟಿದ್ದೀರಿ. ಇದು ಅಷ್ಟು ಸರಿಯಾಗಿ ಕಾಣುವುದಿಲ್ಲ. ಕ್ಲಿ ಇರಬೇಕು ಎಂದು ನಾನು ಹೇಳು ತ್ತೇನೆ, ಇಲ್ಲದಿದ್ದರೆ ಬಹಳ ಕಷ್ಟವಾಗುತ್ತದೆ. ಈ ಬಗ್ಗೆ ಸೆಲೆಕ್ಟ್ ಕಮಿಟಿಯಲ್ಲಿ ತೀವ್ರ ಯೋಚನೆ ಮಾಡಬೇಕೆಂದು ಸೂಚನೆ ಮಾಡುತ್ತೇನೆ.

Seven clear days' notice of an ordinary general meeting ಎಂದು ಹೇಳಿದೆ. ಸ್ವಾಮಿ, ನೋಟಿಸು ಕೊಡುವಾಗ್ಗೆ ಹಿಂದಿನ ತಾರೀಖು ಹಾಕಿ anti-date ಹಾಕಿ ನೋಟಿಸು ಜಾರಿ ಮಾಡುತ್ತಾರೆ ಇದರಲ್ಲಿ ಬಹಳ ಅನಾಹುತವಾಗುತ್ತದೆ ಇದನ್ನು ತಪ್ಪಿಸಲು ಬೇರೆ ಮಾರ್ಗ ಕಂಡು ಹಿಡಿಯಬೇಕು. Certificate of postings ತೆಗೆದುಕೊಳ್ಳುವುದು ಇರಬೇಕು ಇಲ್ಲದಿದ್ದರೆ ಬಹಳ ಅನ್ಯಾಯವಾಗುತ್ತದೆ. Anti-date ಹಾಕಿ ನೋಟೀಸು ಕಳಿಸುತ್ತಾರೆ. ಆದುದರಿಂದ mode of service ಹೇಗೆ ಇರಬೇಕು ಎನ್ನುವುದನ್ನು ಯೋಚನೆ ಮಾಡಬೇಕೆಂದು ಸರಕಾರಕ್ಕೆ ಸೂಚನೆ ಕೊಡುತ್ತೇನೆ.

70. Joint Committees of local bodies and joint levy of Octroi join with any other municipal council or with any sanitary board, town board, cantonment authority, Taluk development board or panchayat. ಇದನ್ನು ಒಂದೇ ತರಹ ಮಾಡಲು ಮಾರ್ಗವಿಲ್ಲವೆ? ಅರಸೀಕೆರೆಯಲ್ಲಿ ಟೌನ್‌ಬೋರ್ಡ್ ಇದೆ. ಮುನಿಸಿಪಾಲಿಟಿ ಇದೆ. ಆಕ್ಟ್ರಾಯ್ ಹಾಕುತ್ತಾರೆ. ಇದು ಸರಿಯಾಗಿ ನಡೆಯುವುದಿಲ್ಲ. ವಜಾ ಮಾಡಬೇಕು. ಸಾನಿಟರಿ ಬೋರ್ಡ್ ಎಂದು ಇರಬಾರದು. ಸೆಲೆಕ್ಟ್ ಕಮಿಟಿಯಲ್ಲಿ ಇದನ್ನು ವಜಾ ಮಾಡಿ ಬೇರೆ ಮಾರ್ಗ ಕಂಡುಹಿಡಿಯಬೇಕು ಎಂದು ಕೇಳಿಕೊಳ್ಳುತ್ತೇನೆ.

ನಿನ್ನೆಯ ದಿವಸ ವಿದ್ಯಾಮಂತ್ರಿಗಳು ಒಂದು ವಿಚಿತ್ರ ಸಂಗತಿ ತಿಳಿಸಿದರು. ಮುನಿಸಿಪಲ್ ಫಂಡ್ ಕೊಟ್ಟಮೇಲೆ ಅದು ಅವರ ಜವಾಬ್ದಾರಿಯಾಗುತ್ತದೆ. ರೂಲ್ 74 ಸರ್ವವ್ಯಾಪಕವಾಗಿಲ್ಲ. ಆದುದರಿಂದ ಈ ಕಡೆ ದೃಷ್ಟಿ ಹರಿಸಬೇಕು ಎಂದು ಹೇಳುತ್ತೇನೆ.

Section 88. Deals with power of municipal councils to borrow money ಒಂದು ಕಡೆ ಹೇಳುತ್ತಿರಾ, ಮುನಿಸಿಪಾಲಿಟಿಗಳು ಸಾಲ ತೆಗೆದುಕೊಳ್ಳಬಹುದು ಅಂತ. ಇನ್ನೊಂದು ಕಡೆ ಹೇಳುತ್ತೀರ ದುಡ್ಡು ತೆಗೆದುಕೊಂಡು ಚೆನ್ನಾಗಿ ಕೆಲಸ ಮಾಡುವುದಿಲ್ಲ ಎಂದು. ನಿಜ, ಈ ಮುನಿಸಿಪಾಲಿಟಿಗಳು ಸಾಲ ಮಾಡಿದರೆ, ಜಾಮೀನು ಕೊಡತಕ್ಕಂಥಾವರು ಯಾರು? ಇದರಲ್ಲಿ 'A municipal council may, in pursuance of a resolution passed at a general meeting and with the previous sanction of the Government... borrow'' ಅಂತ ಇದೆ. ಇದೇ ಸರ್ಕಾರ 55 ಲಕ್ಷ ರೂಪಾಯಿ ಮೈಸೂರು ಬ್ಯಾಂಕಿನಿಂದ ಸಾಲ ಮಾಡಿ, ಮೈಸೂರು ಸಂಸ್ಥಾನದಲ್ಲಿ ಎಲ್ಲ ಮುನಿಸಿಪಾಲಿಟಿಗಳಿಗೂ ಕುಡಿಯುವ ನೀರಿಗೋಸ್ಕರ ಕೊಟ್ಟಿ ದ್ದೀರ, ಅದನ್ನು ವಸೂಲು ಮಾಡುವುದಕ್ಕೆ ಸಾಧ್ಯವಾಗಿಲ್ಲ. ಮುನಿಸಿಪಾಲಿಟಿಗಳು ಅಡ್ಡಾದಿಡ್ಡಿ ದುಡ್ಡು ಖರ್ಚು ಮಾಡಿ, ವಾಟರ್ ವರ್ಕ್ಸ್ ಇಂಕಂಪ್ಲೀಟಾಗಿವೆ. ತಾವು ಇಂತಿಷ್ಟು ಹಣ ಸಾಲ ಮಾಡ ಬಹುದು ಎಂದು ಮುನಿಸಿಪಾಲಿಟಿಗಳಿಗೆ ಸ್ಯಾಂಕ್ಷನ್ ಕೊಟ್ಟಮೇಲೆ, ಆ ಸಾಲವನ್ನು stipulated period ಒಳಗೆ ಕೊಡದಿದ್ದರೆ, ಆ ಸಾಲದ ಹೊಣೆಗಾರಿಕೆ ಯಾರದು. ಸಾರ್ವಜನಿಕರಿಗೆ ಅಥವಾ ಬ್ಯಾಂಕಿನವರಿಗೆ ತೀರಿಸುವವರು ಯಾರು, ಎಂಬುದರ ಬಗ್ಗೆ ಇದರಲ್ಲಿ ವಿಶದವಾಗಿಲ್ಲ. ಈ ಹಣಕಾಸಿನ ವಿಷಯವನ್ನು ಸ್ವಲ್ಪ ಸುದೀರ್ಘವಾಗಿ ಸರ್ಕಾರ ಯೋಚನೆ ಮಾಡಬೇಕು.

2-30 P.M.

106—Procedure for revising assessment list. ಜನಗಳು ಕೊಟ್ಟ ಹಣದಿಂದ, ಜನಗಳಿಗೆ ಬೇಕಾದ amenities create ಮಾಡಬೇಕು, ಒಪ್ಪಿಕೊಳ್ಳುತ್ತೇನೆ. ಅಸೆಸ್‌ಮೆಂಟ್ ಲಿಸ್ಟ್ ರಿವೈಸ್ ಮಾಡುವಾಗ ನಮ್ಮ ಅನುಭವವೇನೆಂದರೆ ಶ್ರೀಮಂತರ ಮನೆಗೆ 25 ರೂಪಾಯಿ, ಬಡವರ ಮನೆಗೆ 24 ರೂಪಾಯಿ ಹಾಕುತ್ತಾರೆ. ಬೆಂಗಳೂರು, ಮೈಸೂರು, ಮಂಗಳೂರು, ತುಮಕೂರು ಎಲ್ಲಿಗಾದರೂ ಹೋಗಿ, ಇದೇ ತರಹ ಫಿಕ್ಸ್ ಮಾಡುತ್ತಾರೆ.

Mr. SPEAKER—Does the Hon'ble Member suggest that it should be deleted ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—No, no. ಶ್ರೀಮಂತರಿಗೂ ಒಂದೇ, ಬಡವರಿಗೂ ಒಂದೇ ಅಸೆಸ್‌ಮೆಂಟ್ ಮಾಡುತ್ತಾರೆ, ಶ್ರೀಮಂತರ ಮನೆಗೂ 25 ರೂಪಾಯಿ, ಬಡವನ ಮನೆಗೂ 24 ರೂಪಾಯಿ. ಈ ತರಹ ಅನ್ಯಾಯ ನಡೆದರೆ, ಅದನ್ನು ಯಾರು ಸರಿಮಾಡುವವರು? ಮುನಿಸಿಪಾಲಿಟಿ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ರೆಸಲ್ಯೂಷನ್ ಮಾಡಿದರೆ ಅದನ್ನು ರಿವೈಸ್ ಮಾಡತಕ್ಕಂಥ ಅಧಿಕಾರವನ್ನು ಸರ್ಕಾರ ಇಟ್ಟುಕೊಳ್ಳಬೇಕು, ಇಲ್ಲದೆ ಹೋದರೆ ಏನೂ ಪ್ರಯೋಜನವಾಗುವುದಿಲ್ಲ. ಮುನಿಸಿಪಾಲಿಟಿಗಳಿಗೆ ಹಣ ಕೊಡದೆ ತಪ್ಪಿಸಿಕೊಳ್ಳುವುದಕ್ಕೆ ಶ್ರೀಮಂತರಿಗೂ ಮತ್ತು ಬಲಾಢ್ಯರಿಗೂ ಸ್ವಲ್ಪ ಮಾರ್ಗವಿದೆ.

114. Liability for payment of taxes on buildings or lands continue in the obsence of notice of transfer. ನಾನು ಇದನ್ನು ಒಪ್ಪಿಕೊಳ್ಳುತ್ತೇನೆ. ಊರು ತುಂಬ ಸೈಟುಗಳು ಇರುತ್ತವೆ ಆದರೆ ಮನೆ ಕಟ್ಟಿಕೊಳ್ಳುವ ಹಾಗಿಲ್ಲ. ಅದಕ್ಕೋಸ್ಕರ ಸರ್ಕಾರ ಇಂಥ ಕಾರ್ಯಕ್ರಮ ಹಾಕಿಕೊಂಡರೆ ಏನೂ ಅಡ್ಡಿ ಬರುವುದಿಲ್ಲ, ಈ ಒಂದು ಬಿಲ್ಲನ್ನು ಪಾಸು ಮಾಡುವುದರಲ್ಲಿ ಸರ್ಕಾರದ್ದು ಸದುದ್ದೇಶವಿದೆಯೆಂದು ನನಗಾದರೂ ಅನ್ನಿಸುತ್ತದೆ. ಆದರೆ ಇದನ್ನು ಇಂಪ್ಲಿಮೆಂಟ್ ಮಾಡುವಾಗ ಯಾರ ವಶೀಲಿ ಬಾಜಿಗೆ ಬೀಳುತ್ತಾರೋ ಎಂಬ ಆತಂಕ ಇದೆ, ವಶೀಲಿ ಬಾಜಿಗೆ ಬೀಳದೆ ಇರುವ ರೀತಿಯಲ್ಲಿ ನೋಡಿಕೊಳ್ಳಬೇಕು.

116. Municipal Council may change fees for certain licences. ತಾವು ಕಾರ್ಪೋರೇಷನ್ನಿನ ಮೇಯರ್ ಆಗಿದ್ದಂಥಾವರೂ ತಾವು ಮುನಿಸಿಪಲ್ ಕೌನ್ಸಿಲ್ಲಿನ ಅಧ್ಯಕ್ಷರಾಗಿದ್ದಂಥಾವರು. ನಾನೇ ಒಂದು ದಿವಸ ನಿಮಗೆ ಒಂದು ಮಾತನ್ನು ಹೇಳಿದೆ: ದುರದೃಷ್ಟವಶಾತ್ ಈ ಖಾತೆ ವಹಿಸಿಕೊಂಡಿದ್ದೀರ, ಈ ಈಟಿಂಗ್ ಹೌಸ್‌ಗಳನ್ನು ತಾವೂ ನೋಡಿದ್ದೀರಿ. ಬೆಂಗಳೂರಿನಿಂದ ಚಿತ್ರದುರ್ಗಕ್ಕೆ ಹೋಗುವವರೆಗೂ ರಸ್ತೆಯಲ್ಲಿರುವ ಹೋಟೇಲುಗಳನ್ನು ನೋಡಿದರೂ ಯಾರಿಗಾದರೂ ಅವುಗಳಲ್ಲಿ ಒಂದು ಲೋಟ ನೀರು, ಇಡ್ಲಿ, ಮಸಾಲೆದೋಸೆ ತಿನ್ನಬೇಕೆನಿಸುವುದಿಲ್ಲ, ನೊಣಗಳು ಜಂಯ್ ಅನ್ನುತ್ತಾ ಇರುತ್ತವೆ. ಈ ಹೋಟೇಲುಗಳು ಇರುವುದು, ಒಳ್ಳೆಯ ಈಟಬಲ್ಸ್, ಡ್ರಿಂಕ್ಸ್, ಹೆಲ್ತಿಫುಡ್ಡನ್ನು ಸ್ಯಾನಿಟರಿ ಕಂಡಿಷನ್ನಿನಲ್ಲಿ ಸರ್ವ್ ಮಾಡುವುದಕ್ಕೆ ಯಾವ ಹೋಟೇಲಿಗೂ ಸಾಧ್ಯವಿಲ್ಲ—ಕ್ಲೀನ್‌ಲಿನೆಸ್ keep up ಮಾಡುವುದಿಲ್ಲ; ಬರೀ ಗಲೀಜು. ಲೈಸೆನ್ಸ್ ಏನೋ ಇರುತ್ತದೆ. ಹಜಾಮರ ಅಂಗಡಿ, ಬಟ್ಟೆ ಒಗೆಯುವ ಅಂಗಡಿ, ಹೋಟೇಲು, ಇನ್ನೂ ಏನೇನಕ್ಕೋ ಲೈಸೆನ್ಸ್ ಕೊಟ್ಟಿದ್ದೀರಿ. ಇವುಗಳನ್ನು ಚೀಫ್ ಆಫೀಸರು, ಹೆಲ್ತ್ ಆಫೀಸರು, ಸ್ಯಾನಿಟರಿ ಇನ್‌ಸ್ಪೆಕ್ಟರು, ಕಮಿಷನರು, ಯಾರಾದರೂ ಇನ್‌ಸ್ಪೆಕ್ಟ್ ಮಾಡಿದ್ದಾರೆಯೋ ? ಬೆಂಗಳೂರು ಪಟ್ಟಣದಲ್ಲಿ ಒಂದು ದೊಡ್ಡ ಹೋಟೇಲಿದೆ. ಅಲಿ ಮಸಾಲೆದೋಸೆಗೆ ಆಲೂಗೆಡ್ಡೆ ತಯಾರುಮಾಡುವುದನ್ನು ಪಕ್ಕದ ಕಂಡಿಯಲ್ಲಿ ನೋಡಿದೆ. ಮೇಲೆ ಹಗ್ಗ ಕಟ್ಟಿದರು; ಅದನ್ನು ಹಿಡಿಕೊಂಡು ಬೇಯಿಸಿರುವ ಆಲೂಗೆಡ್ಡೆಯನ್ನು ಕಾಲಕೆಳಗೆ ಹಾಕಿಕೊಂಡು ತುಳಿಯುತ್ತಾ ಇದ್ದರು ಈ ಆಲೂಗೆಡ್ಡೆ ಬೆಣ್ಣೆ ಮಸಾಲೆಗೆ ಹಾಕಿ ಕೊಡುತ್ತಾರೆ, ಸ್ವಾಮಿ. ಅಂಥ ಹೋಟೆಲುಗಳಿಗೆ ಲೈಸೆನ್ಸು ಕೊಟ್ಟಿದ್ದಾರೆ. Your officers are not efficient to control these hotels. ನಿಮ್ಮ ಹೆಲ್ತ್ ಆಫೀಸರು, ಸ್ಯಾನಿಟರಿ ಇನ್‌ಸ್ಪೆಕ್ಟರು ಹೋಟೇಲಿಗೆ ಹೋದ ತಕ್ಷಣ ಬೆಣ್ಣೆ ಮಸಾಲೆದೋಸೆ ಹಾಕಿಕೊಡುತ್ತಾರೆ, ಅದನ್ನು ತಿಂದುಬಿಟ್ಟು, ಒಂದು ನೂರೋ ಇನ್ನೂರೋ ಜೇಬಿಗೆ ಹಾಕಿಕೊಂಡು, ಮೋಟಾರು ಬೈಸಿಕಲ್ ಮೇಲೆ ಕೂತುಕೊಂಡು ಹೊರಟುಹೋಗಿ ಬಿಡುತ್ತಾರೆ. ಈ ಬಾರ್ಬರ್ ಷಾಪಿನಲ್ಲಿ ನಾನೇ ಮೂರು ಸಾರಿ ವಿಕ್ಟಿಮ್ ಆದೆ; ಮುಖ ಜೇನುಗೂಡು ಆಗಿಹೋಯಿತು. ಬಾಗದಾದ್ ನಾಯಿಂದ ಮತ್ತು ಪ್ಯಾರಿಸ್ ಧೋಬಿಗೆ ಲೈಸನ್ಸು ಕೊಡುತ್ತೀರಾ! ಲೈಸೆನ್ಸ್ ಕೊಡುವಾಗ ಯಾವ ರೀತಿಇದ್ದರೆ ಕೊಡಬೇಕು ಅನ್ನುವುದನ್ನು ತಾವು ಆಕ್ಟಿನಲ್ಲಿ ನಮೂದು ಮಾಡದಿದ್ದರೂ, ರೂಲ್ಸ್ ಮತ್ತು ಬೈಲಾನಲ್ಲಿಯಾದರೂ ಸ್ಪಷ್ಟವಾಗಿ ವಿವರಿಸಿ, ಅವರುಗಳ ಮೇಲೆ ಸ್ವಲ್ಪ ಅಧಿಕಾರ, ಕೈ ಇಟ್ಟುಕೊಂಡರೆ ಸರಿಯಾಗಿ ನಡೆಯುತ್ತದೆ. ಈಬಗ್ಗೆ ಸರ್ಕಾರದವರು ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಅವರನ್ನು ಕೇಳಿಕೊಳ್ಳುತ್ತೇನೆ.

118–119 Power of Government to suspend or prohibit levy of objectionable taxes and power of Government to require Municipal council to impose taxes, ವಿಚಾರ ಹೇಳುತ್ತವೆ. ಮೇಲುಗಡೆ ಪ್ರೊಹಿಬಿಟ್ ಅಂತ ಹೇಳಿ, ಕೆಳಗಡೆ impose ಅಂತ ಹೇಳಿ, hot and cold breath ಮಾಡುತ್ತೀರಲ್ಲಾ. ಇದು ನನಗೆ ಏನೂ ಅರ್ಥವಾಗಿಲ್ಲ, ಯಾವುದು objectionable tax ಅಂತ ಹೇಳಿ ಇಲ್ಲಿಯೇ ತೀರ್ಮಾನ ತೆಗೆದುಕೊಂಡು ತೆಗೆದುಹಾಕಿಬಿಡಿ.

Sri K. PUTTASWAMY.—That is only to prevent vagaries of the Municipal Council, if any.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಪ್ರಜಾಪ್ರಭುತ್ವವಿರುವ ತಮ್ಮ ಆಡಳಿತದಲ್ಲಿ ಮುನಿಸಿಪಾಲಿಟಿಗಳು ತಪ್ಪು ಮಾಡುತ್ತವೆ ಎಂದು ಸರಕಾರಕ್ಕೆ ಮನವರಿಕೆ ಆಗಿರುವುದು ಬಹಳ ಸಂತೋಷ. Objectionable levies ಮುನಿಸಿಪಾಲಿಟಿಗಳು ಹಾಕಿದರೂ ತಮ್ಮ ನೋಟೀಸಿಗೆ ಬರಬೇಕು. ಟ್ಯಾಕ್ಸ್ ಹಾಕುವ ಅಧಿಕಾರ ಮುನಿಸಿಪಾಲಿಟಿಗಳಿಗೆ ಇರಬೇಕು ; ಇಲ್ಲದ ಹೋದರೆ ತಣ್ಣಗೆ ಕೂತಿರುತ್ತವೆ. ಯಾವ ಟ್ಯಾಕ್ಸ್ ಹಾಕುವುದಕ್ಕೂ ಹೋಗುವುದಿಲ್ಲ. ಸೆಕ್ಷನ್ 118 ಏನಿದೆ ಅದನ್ನು ರಿಮೂವ್ ಮಾಡಬೇಕು. You must give free scope to the Municipal Council. ಈಗ ಮಾಡಿರುವ ಸೆಕ್ಷನ್ ಸರಿಯಾಗಿಲ್ಲ, ಅದನ್ನು strike off ಮಾಡಬೇಕು. ಈ ಅಡ್ಡಿ ಹಾಕಿದರೆ, ಈಗ ಕೂತು ತೂಗಡಿಸುತ್ತಿರುವ ಮುನಿಸಿಪಾಲಿಟಿಗಳು ನಾಳೆ ಹಾಸಿಗೆ ಹಾಕಿಕೊಂಡು ಮಲಗಿಕೊಂಡುಬಿಡುತ್ತವೆ, ಯಾವ ಟ್ಯಾಕ್ಸೂ ಹಾಕುವುದಿಲ್ಲ ಎಂದು ತಮ್ಮಲ್ಲಿ ಮನವಿಮಾಡಿಕೊಳ್ಳುತ್ತೇನೆ.

ನಮ್ಮ table of tolls ಪ್ರಕಾರ ಯಾವ ಮುನಿಸಿಪಾಲಿಟಿಯವರು 124ರ ಪ್ರಕಾರ ಹಾಕಿದ್ದಾರೆ? ಮೈಸೂರು ಮುನಿಸಿಪಾಲಿಟಿ ನೋಡೋಣ. ಆಕ್ಟ್ರಾಯಿ ಕೊಡಬೇಕೆಂದು ತೋರಿಸತಕ್ಕ ಆ ಬೋರ್ಡು ಅಲ್ಲಿ ಇಲ್ಲ. ಬೆಂಗಳೂರು ದೊಡ್ಡ ಕಾರ್ಪೊರೇಷನ್. ಇವರು ಎಷ್ಟು ಹಾಕಿದ್ದಾರೆ? ಇಲ್ಲೂ ಕೂಡ ಇಲ್ಲ. ಮೋಟಾರ್‌ನಲ್ಲಿ ಬರುವಾಗ ನಾನು ನೋಡುತ್ತೇನೆ. ಹಿಂದೆ ಹತ್ತು ವರ್ಷದ ಕೆಳಗೆ ಇದ್ದ ಕಮಿಷನರ ರುಜುವೇ ಇರುತ್ತದೆ. ಪಿ. ವಿ. ಆರ್. ರಾವ್ ಅವರು ಹೋಗಿ ನಾಲ್ಕು ವರ್ಷ ಆಯಿತು, ಅವರ ಹೆಸರು ಇನ್ನೂ ಇರುತ್ತದೆ. ಆಯಾಯಾ ಮುನಿಸಿಪಾಲಿಟಿಯ ಚುನಾವಣೆ ಆದ ತಕ್ಷಣ ಏನಿದೆ ಎಂಬುದನ್ನು ನೆಡದೇ ಹಿಂದೆ ಇದ್ದ ಬೋರ್ಡುಗಳನ್ನು ಇಟ್ಟಿದ್ದಾರಲ್ಲಾ. ಅವುಗಳನ್ನು ರಿಪ್ಲೇಸ್ ಮಾಡಬೇಡವೆ? ಆದ್ದರಿಂದ ಈ ಮೈಸೂರು ಸಂಸ್ಥಾನದ ಪುರಸಭೆಗಳ ಆಡಳಿತ ಶಿಥಿಲವಾಗಿದೆ. ಅವುಗಳನ್ನು ರೀಜಾಯಿಂಟ್‌ಮಾಡಿ ಒಳ್ಳೆಯ ರೀತಿಯಲ್ಲಿ ನಡೆಯುವಂತೆ ಮಾಡಲು ಪ್ರಯತ್ನ ಮಾಡಬೇಕು. ಇಲ್ಲದೇ ಇದ್ದರೆ ಜನರನ್ನು mislead ಮಾಡಿದಂತಾಗುತ್ತದೆ. ಹಳ್ಳಿಯವನನ್ನು ಗಂಟೆ ಗಟ್ಟಲೆ ನಿಲ್ಲಿಸುತ್ತಾರೆ. ಆದ್ದರಿಂದ 124ರ ಪ್ರಕಾರ ಅನುಸರಿಸಬೇಕಾದ ನಿಯಮವನ್ನು ರೂಲ್ಸ್‌ನಲ್ಲಿ ಅಥವಾ ಬೈಲಾನಲ್ಲಿ ಕಡ್ಡಾಯವಾಗಿ ನಿಗದಿ ಮಾಡುವುದು ಒಳ್ಳೆಯದು ಎಂದು ಹೇಳುತ್ತೇನೆ.

129 ರಲ್ಲಿ prohibition of advertisements without written permission of Municipal Council ಎಂದು ಇದೆ. ಇದೂ ಕೂಡ ಹಾಗೇ. ಒಂದು ಕಡೆ permission ತೆಗೆದುಕೊಳ್ಳಿ ಎನ್ನುತ್ತೀರಿ. ಇನ್ನೊಂದು ಕಡೆ in certain cases, the permission becomes void ಎನ್ನುತ್ತೀರಿ. ಇದನ್ನು ಬೈಲಾನಲ್ಲಿ ಇಡುತ್ತೀರೋ, ರೂಲ್ಸ್‌ನಲ್ಲಿ ಇಡುತ್ತೀರೋ ಅರ್ಥವಾಗುವುದಿಲ್ಲ. ಮುನಿಸಿಪಲ್ ಕೌನ್ಸಿಲ್‌ನಲ್ಲಿ permission ತೆಗೆದುಕೊಳ್ಳಬೇಕೆಂದರೆ ಎಷ್ಟು ಕಷ್ಟವಾಗುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳಿ, ಅದಕ್ಕೇ ತಾವು ಇದನ್ನು ಸ್ವಲ್ಪ ಸುದೀರ್ಘವಾಗಿ ಸೆಲೆಕ್ಟ್ ಕಮಿಟಿಯಲ್ಲಿ ಯೋಚನೆ ಮಾಡಿ ಓದಿ ಓದಿ ತರ ಕೆಡಸಿಕೊಂಡು ಒಂದು ಕಡೆ permisssion ಬೇಕು ಎನ್ನುತ್ತೀರಿ. ಇನ್ನೊಂದುಕಡೆ permission ಬೇಡ ಎನ್ನುತ್ತೀರಿ. ಅದಕ್ಕೇ ಕ್ಲಾಸ್129-130 ಎರಡನ್ನು ಸೆಲೆಕ್ಟ್ ಕಮಿಟಿಯಲ್ಲಿ ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ.

130 ರಲ್ಲಿ "Summary proceedings may be taken against persons about to leave the municipality" ಎಂದು ಹೇಳುತ್ತೀರಿ. Summary proceedings ಎಂದರೇನು? ಐನೂರು ರೂಪಾಯಿ ಟ್ಯಾಕ್ಸ್ ಕೊಡಬೇಕು ಮನೆ ಮಾರಾಟ ಮಾಡಿ ಹೋಗುತ್ತಾನೆ, ಹೇಗೆ ಮಾಡಬೇಕು? ಮುನಿಸಿಪಾಲಿಟಿ ಏನು ಮಾಡುತ್ತದೆ? ಕೊಡತಕ್ಕ ಬಾಕಿ ಹೇಗೆ ವಸೂಲು ಮಾಡುತ್ತೀರಿ? ಬಾಕಿ ವಸೂಲಿ ಮಾಡದಿದ್ದರೆ ಮುನಿಸಿಪಾಲಿಟಿ ಡೀಫಂಗ್ಟ್ ಆಗಿದೆ ಎಂದು ಅರ್ಥವಾಗುತ್ತದೆ. ಓಡಿ ಹೋಗುತ್ತಾನೆ. summary proceedings ತೆಗೆದುಕೊಳ್ಳಬೇಕೆಂದರೆ special meeting ಕರೆಯಬೇಕು. ಮೂರು ದಿವಸ ನೋಟೀಸ್ ಕೊಡಬೇಕು. ನೋಟೀಸ್ ಪ್ರಕಾರ ಮೀಟಿಂಗ್ ಸೇರಿ ಕ್ರಮ ತೆಗೆದುಕೊಳ್ಳಿ ಎನ್ನುವ ಹೊತ್ತಿಗೆ ಆ ಭೂಪತಿರಂಗ ಪಾಕಿಸ್ಥಾನಕ್ಕೊ ಅಥವಾ ಕಾಬೂಲಿಸ್ಥಾನಕ್ಕೋ ಹೊರಟು ಹೋಗಿರುತ್ತಾನೆ. ಆದ್ದರಿಂದ 138ನೇ ಕ್ಲಾಜ್ ಸ್ವಲ್ಪ ಯೋಚನೆ ಮಾಡಬೇಕಾದ ಕ್ಲಾಜು. ಆ ದೃಷ್ಟಿಯಿಂದ ಈ ಕಡೆಗೆ ಗಮನವಿಡಬೇಕೆಂದು ಹೇಳುತ್ತೇನೆ.

Sri K. PUTTASWAMY.—Powers under Section 138 are enforceable by the Executive officer.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅದು ನೋಡೋಣ, ಸೆಲೆಕ್ಟ್ ಕಮಿಟಿ ಮುಂದೆ ಬರಲಿ.

ಕ್ಲಾಜ್ 300ರಲ್ಲಿ " Powers of Government to appoint Executive Officer for or to supersede a municipal council in certain circumstances" ಎಂದು ಹೇಳಿದ್ದೀರಿ. ಸ್ವಾಮಿ, ನಾನೇ ಬಹಳ ವಿನಯದಿಂದ ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳುತ್ತಾ ಇದ್ದೇನೆ.

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಪಂಚಾಯಿತ್ತಿಗಳು, ತಾಲ್ಲೂಕು ಬೋರ್ಡುಗಳು, ಮುನಿಸಿಪಾಲಿಟಿಗಳು, ಸಿಟಿ ಮುನಿಸಿಪಾಲಿಟಿಗಳು, ಕಾರ್ಪೊರೇಷನ್‌ಗಳು ಯಾವುದೇ ಆಗಲೀ ಎಲ್ಲಕ್ಕೂ ಕೂಡ ಇವತ್ತು ತಾವು ಹೈಕೋರ್ಟಿನ ಕಡೆಗೆ ಬೆಟ್ಟುಮಾಡಿ ತೋರಿಸುತ್ತಾ ಇದ್ದೀರಿ. ಇದರಿಂದ ಎಷ್ಟು ಅನ್ಯಾಯವಾಗುತ್ತದೆ ಎಂಬುದನ್ನು ಯೋಚನೆ ಮಾಡಿದ್ದೀರಾ? ಗದಗ್ ಮುನಿಸಿಪಾಲಿಟಿಯದು ಹೈಕೋರ್ಟಿನ ತೀರ್ಮಾನ ಆಗಿದೆಯೋ ಇಲ್ಲವೋ ಗೊತ್ತಿಲ್ಲ. ನೆನ್ನೆ ದಿವಸ ಕೇಸು ಇತ್ತು. ಏಕೆ ಹೇಳುತ್ತೇನೆ ಎಂದರೆ ತಮಗೆ ಯಾವುದಾದರೂ ಮುನಿಸಿಪಾಲಿಟಿ ಇರುವುದು ಬೇಡ ಎಂದರೆ ಅದರ ಮೇಲೆ ಏನುಬೇಕಾದರೂ ಮಾಡುವುದಕ್ಕೆ ಇದರ ಪ್ರಕಾರ ಅವಕಾಶವಿದೆ. ಈ 300ನೇ ಕಲಂ ಪ್ರಕಾರ ತಮಗೆ ಬಹಳ ಅಧಿಕಾರ ಬರುತ್ತದೆ. ಮೊನ್ನೆ ಯಾರೋ ಹೇಳುತ್ತಾ ಇದ್ದರು, ನಮ್ಮ ಲಾ ಡಿಪಾರ್ಟ್‌ಮೆಂಟ್ ಅಡ್ವೈಸ್ ಕೊಡುತ್ತಾರೆ, ಯಾವುದೂ un-successful ಆಗುವುದಿಲ್ಲ ಎಂದು. ಗದಗ್-ಬೆಟಗೇರಿ ಮುನಿಸಿಪಾಲಿಟಿ ವಿಷಯ ಏನಾಗುತ್ತದೆ ಎಂಬುದನ್ನು ಕಾದು ನೋಡೋಣ. ಆ ದೃಷ್ಟಿಯಿಂದ ಯಾವ ರೀತಿ ನಿಮ್ಮ ಲೀಗಲ್ ಡಿಪಾರ್ಟ್‌ಮೆಂಟ್ ಲೀಗಲ್ ಅಡ್ವೈಸ್ ಕೊಡುತ್ತದೆ ಎಂಬುದು ಅರ್ಥವಾಗುತ್ತದೆ. ಸರ್ಕಾರ ಇಷ್ಟೊಂದು ದೊಡ್ಡ ಅಧಿಕಾರ ಇಟ್ಟುಕೊಂಡು ಆಡಳಿತ ಮಾಡುತ್ತೇವೆ ಎಂದರೆ hanging sword ಇದ್ದಹಾಗೆ ಅದು ಯಾವಾಗ ಬೇಕಾದರೂ ಕುತ್ತಿಗೆ ಮೇಲೆ ಬೀಳಬಹುದು. ಆ ಹೆದರಿಕೆ ಇಟ್ಟುಕೊಂಡು ಮುನಿಸಿಪಾಲಿಟಿಗಳು ಕೆಲಸ ಮಾಡುವುದಾದರೆ ತೊಂದರೆಯಾಗುತ್ತದೆ. ಆದ್ದರಿಂದ ಕ್ಲಾಸ್ 300ನ್ನು ಕೂಡ ಸೆಲೆಕ್ಟ್ ಕಮಿಟಿಯವರು ತೀವ್ರವಾಗಿ ಪರ್ಯಾಲೋಚನೆ ಮಾಡಿ ಇದರಲ್ಲಿರತಕ್ಕ ದೋಷ ನಿವಾರಣೆ ಮಾಡಿ ದೋಷರಹಿತವಾದ ವಿಧೇಯಕವನ್ನು ಈ ರಾಜ್ಯದ ಪುರಸಭೆಗಳ ಕೈಯಲ್ಲಿಟ್ಟು, ಮೈಸೂರು ಸಂಸ್ಥಾನದ ಪುರಸಭೆಗಳಲ್ಲಿ ವಾಸ ಮಾಡುತ್ತಾ ಇರತಕ್ಕ ಕಾಲು ಭಾಗದ ಜನಕ್ಕೆ ಸಿಕ್ಕಬೇಕಾದ ಎಲ್ಲಾ ಸೌಲಭ್ಯ, ಸೌಲತ್ತುಗಳನ್ನು ಸಿಕ್ಕುವಂತೆ ಮಾಡಿ ಅವರು ಒಂದು ಒಳ್ಳೆಯ ರೀತಿಯಲ್ಲಿ ಜೀವನ ನಡೆಸುವುದಕ್ಕೆ ಸಹಾಯವಾಗುವಂತೆ ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†Sri D. VENKATRAMAIAH (Robertsonpet).—I rise to give my wholehearted support to this consolidating piece of legislation both for the City municipality and the ordinary town municipality. I was extremely happy when I read section 3 of the Act. I have been elected from the Robertsonpet constituency and this bill is of particular, special significance because there is no municipality now in the Robertsonpet area. Under the Act of 1906, the Mysore Mines Act, a Board was constituted. For the last 50 years a Sanitary Board is in existence. For some time some persons were being elected indirectly to the Sanitary Board, both officials and non-officials. From the last 10 years Government have been attempting to pass the Robertsonpet Municipal Bill. It was introduced in 1951 but later it was withdrawn for some reason or the other. Again in 1957, 1960 and as late as 1962 the bill was published but not introduced. For the last 10 years the Board is being nominated and certain officials and non-officials are members. The Minister for Municipal Administration knows how many applications might have come from that area and how many petitions from that area have been sent to the president and the Prime Minister, to constitute a municipality. Now only 6 days ago a Sanitary Board has been constituted. I welcome it and I hope that atleast when this bill is passed into law, Robertsonpet will become a municipality. Of course the Mining and the non-mining area should be separated; the mining area having a board and the non-mining area having a municipality. I hope the municipality will become a fact for Robertsonpet atleast now.

Sir, when I went through Section 13 of this Act, I felt, subject to correction of course, whether a special provision can be made for women

to have special seats in the Municipal Council. My remembrance is, a matter of this kind had come up before the Madras High Court and it has been held to be discriminatory, and as such, they cannot be given special representation. Of course, a convention may be made that so many seats may be left to the women. As a matter of fact, even to the Assembly it is more a question of convention.

About the question of removal of the President for mis-conduct Section 45 read with Section 42 (1), a President can be prosecuted if he does not hand over charge of his office when once removed; a person concerned may rebut it saying that he is not under arrest. When once that is shown, he can easily escape the liability. So Section 42 (10) is absolutely necessary. Regarding Section 45 (3)—prosecution of a Municipal President who has been removed. I am reminded, it is in the year 1925 or 1926 when Sir Albion Benerjee was the Dewan of Mysore, that a President of the Kolar Town Municipal Council was removed. Then, he was given a notice to hand over charge. The Deputy Commissioner went to him and requested him also, but still he did not hand over charge. Sir Albion Benerjee had to go to the Municipal Council, stand at the door, get the Police, brake-open the door and take charge of the office. The threat of a prosecution, when he does not hand over charge immediately once he is removed, I think, is absolutely necessary, and such a provision has got to remain there.

I feel that the Bill is being referred to a Joint Select Committee and as such all the other things will be considered by them. Thank you, Sir.

† ಶ್ರೀ ಎ. ಕೃಷ್ಣಶೆಟ್ಟಿ (ಮಂಗಳೂರು.—I) ಅಧ್ಯಕ್ಷ ಮಹಾಶಯರೇ, ಈ, ಬಿಲ್ಲನ್ನು ನಾನು ವಿರೋಧಿಸುತ್ತೇನೆ. ಈ ದಿವಸ ನಮ್ಮ ರಾಜ್ಯದಲ್ಲಿ ಏಳು ರೀತಿಯ ಮುನಿಸಿಪಲ್ ಆಕ್ಟ್‌ಗಳು ಇರುತ್ತವೆ. ಇವುಗಳನ್ನೆಲ್ಲ ಈಗ ಒಂದು ಮಾಡಿ ರಾಜ್ಯಕ್ಕೆಲ್ಲ ಒಂದು ಸಮಗ್ರ ಬಿಲ್ಲನ್ನು ತರುವ ಅಭಿಪ್ರಾಯದ ಮೇಲೆ ಈಗ ಈ ಒಂದು ಬಿಲ್ಲನ್ನು ತಂದಿದ್ದಾರೆ. ಇದರ ಘಟನಾವಳಿ ಯಾವ ರೀತಿಯಾಗಿ ಈ ಸ್ಥಳೀಯ ಸಂಸ್ಥೆಗಳ ಬಗ್ಗೆ ಇರಬೇಕು ಎಂಬ ಒಂದು ಯೋಜನಾ ಬದ್ಧವಾದ ಸಂಸ್ಥೆಯನ್ನು ನಿರ್ಮಿಸಿ, ಅವು ಯಾವ ರೀತಿ ಇರಬೇಕು, ಯಾವ ರೀತಿ ಕೆಲಸ ಮಾಡಬೇಕು, ಅವುಗಳ ಜವಾಬ್ದಾರಿ ಏನು, ಅವುಗಳಿಗೆ ಸ್ವಾತಂತ್ರ್ಯ ಎಷ್ಟರಮಟ್ಟಿಗಿರಬೇಕು ಎನ್ನತಕ್ಕ ನಿಯಾಮವಳಿಗಳೆಲ್ಲ ಇದರಲ್ಲಿರಬೇಕೆಂದು ಹೇಳುತ್ತಿರುವಾಗ, ಈ ದಿವಸ ತಂದಿರತಕ್ಕ ಈ ಬಿಲ್ಲು ಈ ಸಂಸ್ಥೆಗಳಿಗೊಂದು ಯಾವ ಮನ್ನಣೆಯನ್ನೂ ಕೊಡದಿರತಕ್ಕದ್ದಾಗಿದ್ದು ಈ ಸ್ಥಳೀಯ ಸಂಸ್ಥೆಗಳನ್ನು ಒಂದು ರೀತಿಯಲ್ಲಿ ಈ ಮಸೂದೆ ಅಪಾದಿಸುತ್ತಿರುವಂತಿದೆ ಎಂದು ನಾನೀಗ ಹೇಳಬಯಸುತ್ತೇನೆ. ಈ ದಿವಸ ಈ ಮುನಿಸಿಪ್ಯಾಲಿಟಿಗಳ ಸ್ಥಿತಿಯೇನಾಗಿದೆ? ಪ್ರತಿಯೊಂದು ಮುನಿಸಿಪ್ಯಾಲಿಟಿಗಳಲ್ಲೂ ಸಾಲ ತಾಂಡವಾಡುತ್ತಿದೆ. ಅವುಗಳಿಗೆ ಸ್ಲಂಕ್ಲಿಯರ್ ಮಾಡುವುದಕ್ಕಾಗಿಲ್ಲ, ಮಾರ್ಗಗಳನ್ನು ಅಗಲ ಮಾಡುವುದಕ್ಕಾಗಿಲ್ಲ, ಹುಡುಗರ ಆಟದ ಮೈದಾನಗಳನ್ನೆಲ್ಲಾ ತಪ್ಪಿಸಿ ಈ ದಿವಸ ಅಲ್ಲಿ ಕಟ್ಟಡಗಳನ್ನು ಕಟ್ಟಿಸಲಾಗುತ್ತಿದೆ; ಸಾರ್ವಜನಿಕ ಚಟುವಟಿಕೆಗಳಿಗೆ ನಗರಗಳಲ್ಲಿ ಅವಕಾಶವೇ ಇಲ್ಲ. ಇಂಥ ಒಂದು ಪರಿಸ್ಥಿತಿ ಇರುವಾಗ ನಗರಗಳಲ್ಲಿರತಕ್ಕ ಜನಗಳಿಗೆ ಅವರ ಒಂದು ಸಾಮಾನ್ಯ ಜೀವನವನ್ನು ನಡೆಸಿಕೊಳ್ಳತಕ್ಕ ಚೈತನ್ಯವು ಅವರಿಗೆ ಬರುವಂತೆ ಮಾಡಬೇಕೆಂಬ ದೃಷ್ಟಿಯಿಂದ ಅವರವರ ಗ್ರಾಮಾಡಳಿತವನ್ನು ಅವರೇ ನಡೆಸಿಕೊಳ್ಳುವಂತೆ ಮಾಡಲು ಈಗ ಈ ಒಂದು ಬಿಲ್ಲನ್ನು ತಂದಿದ್ದಾರೆ. ನಾವೀದಿವಸ ಈ ಬಿಲ್ಲು ಇರತಕ್ಕ ಇದರ ಸ್ವರೂಪವನ್ನು ನೋಡಿದರೆ ಘಟನಾತ್ಮಕ ರೂಪವಾದ ಈಗಿರತಕ್ಕ ಪ್ರಜಾಪ್ರಭುತ್ವಾಡಳಿತದಲ್ಲಿ ಅಧಿಕಾರ ವಿಕೇಂದ್ರೀಕರಣವಿರಬಾರದೆಂಬುದನ್ನು ಈ ಬಿಲ್ಲಿನಲ್ಲಿ ಈಗ ನಾವು ನೋಡುತ್ತಿದ್ದೇವೆ. ಆ ದೃಷ್ಟಿಯಿಂದ ಇದನ್ನು ನೋಡುವುದಾದರೆ ಇದು ನಿಜವಾಗಿಯೂ ಅಂಥ ಒಂದು ಸರಿಯಾದ ಬಿಲ್ ಅಲ್ಲ ಎಂತ ಹೇಳುವುದಕ್ಕೆ ಸಾಧ್ಯ ಆಗುತ್ತದೆ. ಈ ಸಂಸ್ಥೆಗಳ ಅಧಿಕಾರವನ್ನು ತುಂಬಾ ಅಧಿಕಾರಿಗಳ ಕೈಲೇ ಇರಿಸಿರುತ್ತಾರೆ. ಹೀಗಾಗಿ ಈ ದಿವಸ ಈ ಡೆಮಾಕ್ರೆಸಿಯಲ್ಲಿ ಆಡಳಿತ ನಡೆಸುವುದು ಒಂದು ಕೂದಲೆಳೆಯಲ್ಲಿ ತಗುಲಿಕೊಂಡು ತೂಗಾಡುತ್ತಿರುವಂತೆ ಭಾಸವಾಗುತ್ತಿದೆ. ಈ ಸಂ

(ಶ್ರೀ ಎ. ಕೃಷ್ಣಶೆಟ್ಟಿ)

ಆಡಳಿತ ಈ ದಿವಸ ಅಂಥ ಒಂದು ಅಪಾಯಕಾರಿಯ ಸ್ಥಿತಿಯಲ್ಲಿದೆ, ಈ ದಿವಸ ಈ ಸಂಸ್ಥೆಗಳಿಗೆ 20 ಸಾವಿರ ರೂಪಾಯಿಗಳ ಒಂದು ಬಡ್ಜೆಟ್ಟನ್ನು ಮಂಜೂರು ಮಾಡುವುದಕ್ಕೆ ಸಾಧ್ಯವಿಲ್ಲ. ಈ ಹಣ ಕಾಸುಗಳನ್ನು ಮುಟ್ಟುವುದಕ್ಕಂತೂ ಅಧ್ಯಕ್ಷರಿಗೂ—ಉಪಾಧ್ಯಕ್ಷರಿಗೂ ಅವಕಾಶವೇ ಇಲ್ಲ. ಇಷ್ಟಾಗಿದ್ದರೂ ಕೂಡ ಅಧ್ಯಕ್ಷರಾಗತಕ್ಕವರೂ—ಉಪಾಧ್ಯಕ್ಷರಾಗತಕ್ಕವರೂ ಸಾಲಗಾರರಾಗಿರಬಾರದೆಂದು ಬೇರೆ ಇದರಲ್ಲಿ ಹೇಳಲಾಗಿದೆ. ಯಾವ ಒಂದು ಮುನಿಸಿಪಲ್ ಕೌನ್ಸಿಲ್ಲಿಗೆ ಜನರು ಆರಿಸಿ ಬರಲು ಅವಕಾಶವಿಲ್ಲವೋ ಅಂಥ ಕಡೆಗಳಲ್ಲಿ ಸರ್ಕಾರದವರು ನಾಮಕರಣ ಮಾಡತಕ್ಕ ಅಧಿಕಾರವನ್ನು ಅವರ ಕೈಲಿಟ್ಟುಕೊಂಡಿದ್ದಾರೆ. ಹಿಂದೆ ಈ ಅಸೆಂಬ್ಲಿ ಮತ್ತು ಪಾರ್ಲಿಯಮೆಂಟಿಗೆ ಚುನಾವಣೆ ನಡೆಯಬೇಕಾಗಿದ್ದ ವೇಳೆಯಲ್ಲಿ ಡಬಲ್ ಮೆಂಬರ್ ಕಾನ್ಸ್ಟಿಟ್ಯುಯೆನ್ಸಿಗಳೇನಿದ್ದವು ಅವುಗಳನ್ನೆಲ್ಲ ಈಗ ತೆಗೆದು ಹಾಕಿ ಸಿಂಗಲ್ ಮೆಂಬರ್ ಕಾನ್ಸ್ಟಿಟ್ಯುಯೆನ್ಸಿಗಳನ್ನಾಗಿ ಮಾಡಿದ್ದಾರೆ. ಹೀಗಿರುವಾಗ ಈ ಮುನಿಸಿಪ್ಯಾಲಿಟಿ ಚುನಾವಣೆಗಳ ಬಗ್ಗೆ 4-5 ಜನರು ಒಟ್ಟಿಗೆ ಆರಿಸಿ ಬರತಕ್ಕಂಥ ಒಂದು ವ್ಯವಸ್ಥೆ ಮಾಡಿದ್ದಾರೆ. ಇದು ಒಂದು ಅವ್ಯವಸ್ಥೆಯೇ ಸರಿ. ಈಗ ಹಾಲಿ ನಮ್ಮ ಮಂಗಳೂರು ಮುನಿಸಿಪ್ಯಾಲಿಟಿಯಲ್ಲಿ 36 ಜನ ಕೌನ್ಸಿಲರುಗಳಿದ್ದಾರೆ. ನಾಳೆ ಈ ಬಿಲ್ಲ ಆಕ್ಟಾದರೆ ಅಲ್ಲಿ ಕೌನ್ಸಿಲರ ಸಂಖ್ಯೆ 31 ಕ್ಕೆ ಇಳಿಯಬೇಕಾಗುತ್ತದೆ. ಈ ಬಿಲ್ಲಿನಲ್ಲಿ ಹೇಳಿರುವ ಪ್ರಕಾರ ನಡೆದರೆ ಚುನಾವಣೆಯಲ್ಲಿ ಕರಪ್ಷನ್ ಜಾಸ್ತಿ ಆಗುವುದಕ್ಕೆ ಅವಕಾಶವಾಗುತ್ತದೆ. ಇಂಥ ಒಂದು ಅಕ್ರಮ ನಡವಳಿಕೆಯ ಕಾನೂನಾಗುತ್ತದೆ ಇದು. ಈ ದಿವಸ ಇಂಥ ಒಂದು ಪದ್ಧತಿ ಇಂಥ ಒಂದು ಆಕ್ಟ್ ಆ ಮದ್ರಾಸಿನಲ್ಲಿ ಜಾರೀಲಿಲ್ಲ—ಕೇರಳದಲ್ಲೂ ಜಾರೀಲಿಲ್ಲ. ಸಾಲದ್ದಕ್ಕೆ ಈ ದಿವಸ ಜನರ ಮೇಲೆ ಶೋಷಣೆ ಮಾಡತಕ್ಕ ಆಡಳಿತವನ್ನು—ಅಧಿಕಾರವನ್ನು ಯಾವ ರೀತಿ ತಡೆಗಟ್ಟಬೇಕು, ಈ ಚುನಾಯಿತ ಜನರಿಗೆ ಹೀಗೆ ಅಧಿಕಾರಗಳನ್ನು ಹೆಚ್ಚು ಮಾಡಬೇಕು ಎಂದು ಆಲೋಚನೆ ಮಾಡತಕ್ಕ ಕಾಲದಲ್ಲಿ ಈಗಲೂ ಕೂಡ ಅಧಿಕಾರಿಗಳ ಕೈಗೇ ಹೆಚ್ಚು ಅಧಿಕಾರ ಕೊಡುವಂಥ ಒಂದು ಬಿಲ್ಲನ್ನು ತಂದಿರುವುದು ಎಷ್ಟು ಮಾತ್ರಕ್ಕೂ ಸರಿಯಲ್ಲ. ನಾನು ಇದರಲ್ಲಿ ಕೆಲವು ಕ್ಲಾಜುಗಳನ್ನು ಮೊದಲೇ ಗುರ್ತು ಮಾಡಿದ್ದೇನೆ. ಈ ಮಸೂದೆಯನ್ನೂ ಸೆಲೆಕ್ಟ್ ಕಮಿಟಿ ಮುಂದೆ ಹೋಗಿ ಮಾರ್ಪಾಡಾಗಿ ಬರುತ್ತದೆ. ಅನಂತರ ಈ ಸಭೆಯ ಮುಂದೆ ಮತ್ತೆ ಈ ಬಿಲ್ ಬಂದಾಗ ನಾವು ತಿದ್ದುಪಡಿಗಳನ್ನು ಸೂಚಿಸಲು ಅವಕಾಶವಿದೆ.

ಇನ್ನು ಕ್ಲಾಜ್ 8ರಲ್ಲಿ Constitution of Municipal Councils ವಿಚಾರ ಹೇಳಿದ್ದಾರೆ. ಪೀರಿಯೆಡಿಕಲ್ ಆಗಿ ನಡೆಯತಕ್ಕ ಜಾತ್ರೆ ವಗೈರೆಗಳಲ್ಲೂ ಕೂಡ ಈ ಮುನಿಸಿಪ್ಯಾಲಿಟಿಗಳನ್ನು ಮಾಡಲಿಕ್ಕೆ ಬರುತ್ತೆಂದು ಹೇಳಿರತಕ್ಕದ್ದನ್ನು ನೋಡಿ ನನಗೆ ನಗೆ ಬರುತ್ತಿದೆ. ಇದರ ಅರ್ಥ ವೇನೆಂಬುದೇ ನನಗೆ ಗೊತ್ತಾಗುತ್ತಿಲ್ಲ. ಈ Constitution of Municipal Councils ಬಗ್ಗೆ ಹೇಳುವುದಾದರೆ ನಮ್ಮ ಜಿಲ್ಲೆಯಲ್ಲಿ ನಾನು ಲೆಕ್ಕ ಮಾಡಿರುವ ಪ್ರಕಾರ 23 ಟೌನ್ ಮುನಿಸಿಪ್ಯಾಲಿಟಿಗಳಾಗಲು ಅವಕಾಶವಿರುತ್ತದೆ. ಅಂದರೆ ಈಗಿರತಕ್ಕ ಉಡುಪಿ, ಕುಂದಾಪುರ ಮತ್ತು ಮಂಗಳೂರು ಈ ಮುನಿಸಿಪ್ಯಾಲಿಟಿಗಳನ್ನು ಬಿಟ್ಟುಕೊಂಡು ಹೇಳುತ್ತಿದ್ದೇನೆ. ಎಲ್ಲೆಲ್ಲಿ 10 ಸಾವಿರ ಜನ ಸಂಖ್ಯೆಯಿರುತ್ತದೆಯೋ ಅಲ್ಲಿ ಒಂದೊಂದು ಮುನಿಸಿಪ್ಯಾಲಿಟಿ ಪ್ರಾರಂಭವಾಗಲು ಅವಕಾಶವಿರುವುದಾದರೆ ನಮ್ಮ ಜಿಲ್ಲೆಯೊಂದರಲ್ಲೇ 23 ಮುನಿಸಿಪ್ಯಾಲಿಟಿಗಳಾಗಲು ಅವಕಾಶವಿದೆ. ಇನ್ನು ಆಕ್ಟ್ರಾಯಿ ವಿಧಿಸತಕ್ಕ ವಿಚಾರಕ್ಕೆ ಬಂದರೆ—ಈ ಸೂಳ್ಯದಿಂದ—ಸುರತ್ಕಲ್ ಮಾರ್ಗ ಮಂಗಳೂರಿಗೆ ಬರಬೇಕಾದರೆ ಬಿ.ಸಿ. ರೋಡ್ ಸೇರಿಕೊಂಡು ಒಂದು ಸರಕೆಗೆ 4-5 ಸಾರ್ತಿ ಆಕ್ಟ್ರಾಯಿ ಬೀಳತಕ್ಕ ಪ್ರಸಂಗವಿರುತ್ತೆ. ಒಂದು ಕಡೆ ಆಕ್ಟ್ರಾಯಿ ಕೊಟ್ಟು ಅದು ಹೊರಟ ಸ್ಥಳದಿಂದ ಮಾರಾಟದ ಸ್ಥಳವನ್ನು ಸೇರುವ ಹೊತ್ತಿಗೆ ಸರಕಿಗೇ ಹತ್ತಾರು ಸಾರ್ತಿ ಆಕ್ಟ್ರಾಯಿ ಕೊಡಬೇಕಾಗಿ ಬರುತ್ತದೆ.

Mr. SPEAKER.—The House will now rise for half-an-hour.

The House adjourned for Recess at Three of the Clock and re-assembled at Thirty Minutes past Three of the Clock.

[MR. SPEAKER in the Chair]

ಶ್ರೀ ಎ. ಕೃಷ್ಣಶೆಟ್ಟಿ.—ಮುನಿಸಿಪಾಲಿಟಿಗಳಿಗೆ ಆ ಕ್ಷೇತ್ರದಿಂದ ಆರಿಸಿ ಬಂದಂಥ ಶಾಸನ ಸಭೆ ಸದಸ್ಯರನ್ನು ಕೂಡ *ex-officio* members ಆಗಿ ತೆಗೆದುಕೊಳ್ಳಬೇಕು ಎಂದು ನನ್ನ ಅಭಿಪ್ರಾಯ. ತಾಲ್ಲೂಕ್ ಬೋರ್ಡ್‌ಗಳಲ್ಲಿ ಹೀಗೆಯೇ ಇದೆ. ಅದೇ ಹೊತ್ತಿಗೆ ಸ್ಥಳೀಯ ಸಂಸ್ಥೆಗಳಲ್ಲಿಯೂ ಆ ರೀತಿ ಏಕೆ ಮಾಡಬಾರದು ? ಅದರಲ್ಲಿ ನನಗೆ ತಪ್ಪು ಏನೂ ಕಾಣುವುದಿಲ್ಲ. ಆ ಪ್ರದೇಶದಿಂದ ಆರಿಸಿ ಬಂದಂಥ ಎಂ. ಎಲ್. ಎ. ಗಳು ಮಾತ್ರವಲ್ಲದೆ, ಆ ಪ್ರದೇಶವನ್ನು ಪ್ರತಿನಿಧಿಸತಕ್ಕ ಎಂ.ಎಲ್.ಸಿ. ಗಳು ಹಾಗೂ ಎಂ. ಪಿ. ಗಳು ಸಹ ಮುನಿಸಿಪಾಲಿಟಿಗಳ *ex-officio* members ಆಗಿ ಇರಬೇಕೆಂದು ನನ್ನ ಸೂಚನೆ.

ಅಧ್ಯಕ್ಷರಿಗೆ ಅಧಿಕಾರ ಬಹಳ ಕಡಮೆ. ಈಗ ವೈಸ್ ಪ್ರೆಸಿಡೆಂಟರಿಗೂ ಹಾಗೆಯೇ ಕಡಮೆ ಯುಂಟು. ನಾನು ಹೇಳುವುದಾದರೆ ಅವರಿಗೆ ಅಧಿಕಾರ ಹೆಚ್ಚಾಗಿ ಕೊಡಬೇಕು ಮತ್ತು ರಾಜ ಕೀಯವು ಸ್ಥಳೀಕ ಆಡಳಿತದಲ್ಲಿ ಬರದ ಹಾಗೆ ನೋಡಬೇಕು. ಅದಕ್ಕೆ ಇದರಲ್ಲಿ ಅವಕಾಶ ಮಾಡಿ ಕೊಡಬೇಕೆಂದು ಹೇಳುತ್ತೇನೆ. ಈಗ ಚುನಾವಣೆಗಳು ರಾಜಕೀಯ ಹೋರಾಟದ ಕಣಗಳಾಗಿವೆ. ಸ್ಥಳೀಕ ಆಡಳಿತದಲ್ಲಿ ರಾಜಕೀಯ ಬಂದರೆ ಜನರಿಗೆ ಬೇಕಾದ ಕೆಲಸಗಳನ್ನು ಮಾಡುವುದಕ್ಕೆ ಬರುವು ದಿಲ್ಲ. ಆದುದರಿಂದ ಮುನಿಸಿಪಾಲಿಟಿಗಳಲ್ಲಿ ರಾಜಕೀಯ ಪಕ್ಷಗಳಾಗಿ ಸ್ಪರ್ಧಿಸುವುದಕ್ಕೆ ಅವಕಾಶ ವನ್ನು ಕೊಡಬಾರದು. ಅಂಥ ವಿಧಿಯನ್ನು ಕೂಡ ಎಲ್ಲಿ ಕಲ್ಪಿಸಬೇಕು. ಇದಕ್ಕೆ ಪ್ರಥಮ ಹೆಜ್ಜೆ ಯಾಗಿ ಅಧ್ಯಕ್ಷರು ಅಥವಾ ಚೇರ್ಮನ್ನರು ಇಡೀ ಕ್ಷೇತ್ರದಿಂದ ಆರಿಸಿ ಬರುವ ಹಾಗೆ ಆಗಬೇಕು. ಅಂಥ ಒಂದು ಅವಕಾಶವನ್ನು ಇಲ್ಲಿಯೂ ಮಾಡಿದರೆ, ಒಂದು ಪಕ್ಷಕ್ಕೆ ಅಂಟಿಕೊಳ್ಳುವುದಿಲ್ಲ, ಕೇಂದ್ರ ದಲ್ಲಿಯೂ ಇದನ್ನು ಹೇಳಿಕೊಂಡು ಬಂದಿದ್ದಾರೆ ಮತ್ತು ಪ್ರಧಾನ ಮಂತ್ರಿಗಳೂ ಕೂಡ ಇದನ್ನು ಒತ್ತಿ ಒತ್ತಿ ಹೇಳಿಕೊಂಡು ಬಂದಿದ್ದಾರೆ. ಸ್ಥಳೀಕ ಆಡಳಿತದಲ್ಲಿ ರಾಜಕೀಯ ಬರದ ಹಾಗೆ ನೋಡಿ ಕೊಳ್ಳಬೇಕು.

ಕೌನ್ಸಿಲರುಗಳಿಗೆ sitting fee ಕೊಡಬೇಕು. ಚೇರ್‌ಮನ್ ಮತ್ತು ವೈಸ್ ಚೇರ್ ಮನ್ ಅವರಿಗೆ ಇಷ್ಟು ಸಂಬಳವೆಂದು ನಿರ್ಣಯ ಮಾಡಬೇಕು. ಈಗ ಒಂದು ಕೆಲಸ ಮಾಡುವುದು ಎಂದರೆ, ಅದರಲ್ಲಿ ಬೇರೆ ರೀತಿಯ ಅನುಕೂಲವನ್ನು ನೋಡುವುದರ ಬದಲು ಜನರ ಇಂತಿಷ್ಟು ಹಣವನ್ನು ತೆಗೆದುಕೊಂಡು ಕೆಲಸ ಮಾಡುವುದೆಂದರೆ ಅದು ನಿಜವಾಗಿಯೂ ಒಳ್ಳೆಯ ರೀತಿಯಲ್ಲಿ ನಡೆಯಲಿಕ್ಕೆ ಸಾಧ್ಯವುಂಟು. ಈಗಿನ ಸಮಯದಲ್ಲಿ ಲಂಚ ರುಷುವತ್ತುಗಳಿರುವಾಗ, ಪಾರ್ಟಿ ಪಕ್ಷಗಳ ಒತ್ತಡವಿರುವಾಗ, ಕೆಲಸ ಮಾಡುವವರು ನಿರ್ಭೀತಿಯಿಂದ, ಕರ್ತವ್ಯ ದೃಷ್ಟಿಯಿಂದ ಕೆಲಸ ಮಾಡಬೇಕಾಗಿದ್ದರೆ, ಈ ಒಂದು ಅನುಕೂಲವನ್ನು ಕಲ್ಪಿಸಿಕೊಟ್ಟರೆ ಸ್ವತಂತ್ರವಾಗಿ ಕೆಲಸ ಮಾಡಲಿಕ್ಕೆ ಸಾಧ್ಯವಾದೀತು ಎಂದು ನನ್ನ ಅಭಿಪ್ರಾಯ.

ಈ ಆಕ್ಟಿನಲ್ಲಿ rules and bye-laws ಎಂದು ಉಂಟು. ನನಗೆ ಕಾಣುವ ಹಾಗೆ ಈ ಆಕ್ಟು ಒಂದು ದೊಡ್ಡ ಪುರಾಣದ ಹಾಗೆ ಇದೆ. ಅದು ಬಹಳ ಸಂಕ್ಷೇಪವಾಗಿರಬೇಕು. ಸೂಕ್ಷ್ಮವಾಗಿರ ಬೇಕು ಮತ್ತು ಸ್ಪಷ್ಟವಾಗಿರಬೇಕು—ಅದೇ ಹೊತ್ತಿಗೆ ಅದರಲ್ಲಿ rules and bye-laws ಕೂಡ ಒಳಪಡಿಸಿರಬೇಕು. ಈಗ ನಮ್ಮ ಮುಂದಿರುವ ಆಕ್ಟ್ ನೋಡಿದರೆ, ಕೇರಳದಲ್ಲಿ 'ಅವಿಯಲ್' ಎಂದು ಒಂದು ಪಲ್ಲೆ ತಯಾರು ಮಾಡುತ್ತಾರೆ, ಆ ರೀತಿಯಲ್ಲಿ ಇದನ್ನೆಲ್ಲ ಸರಿಪಡಿಸಬೇಕು.

ಇನ್ನು ತೆರಿಗೆಗಳ ವಿಷಯದಲ್ಲಿ ನನಗೆ ಕಾಣುವುದೆಂದರೆ, ಒಂದು ಸಲ ತೆರಿಗೆಯನ್ನು ಹಾಕಿದ ಮೇಲೆ ಮತ್ತೆ ಅದೇ ರೀತಿಯ ತೆರಿಗೆಗಳನ್ನು ಹೊರಿಸುವುದು ಸರಿಯಲ್ಲ, ನಿನ್ನೆ ಮಾತನಾಡುವಾಗ ಸ್ಥಳೀಕ ಆಡಳಿತದ ಮಟ್ಟಿಗೆ ಉತ್ತಮ ಅನುಭವವಿದ್ದ ಶ್ರೀಮಾನ್ ಶ್ರೀನಿವಾಸ ನಾಯಕ ಅವರು ಈ ವಿಚಾರ ಹೇಳಿದ್ದಾರೆ. Land revenue ಮೇಲೆ ತೆರಿಗೆ ಹಾಕತಕ್ಕದ್ದು, Commercial tax ವಸೂಲ್ಮಾಡುವುದರ ಮೇಲೆ ತೆರಿಗೆ ಹಾಕತಕ್ಕದ್ದು, ಮತ್ತೆ ಕೋಣದ ಮೇಲೆ ತೆರಿಗೆಯನ್ನು ಹಾಕ ತಕ್ಕದ್ದು, ಈ ರೀತಿಯ ತೆರಿಗೆಗಳನ್ನು ಹಾಕಬಹುದು. ಆದರೆ ಮಂಗಳೂರು ಮುನಿಸಿಪಾಲಿಟಿ ಯನ್ನು ತೆಗೆದುಕೊಂಡರೆ ಒಂದು ವಸ್ತು ಅಲ್ಲಿಗೆ ಬರುವುದರೊಳಗೆ 17 ಕಡೆ toll ಕೊಡಬೇಕಾಗು ವುದರಿಂದ ಆ ಪದಾರ್ಥದ ಬೆಲೆ ಎಷ್ಟೋ ಪಟ್ಟು ವೃದ್ಧಿಯಾಗಿದೆ. ಇದರಲ್ಲಿ ಒಂದು ಪಾಲು ಸ್ಥಳೀಕ ಮುನಿಸಿಪಾಲಿಟಿಗೆ ಸಿಕ್ಕುತ್ತದೆ. ಆದರೂ ಸಹ octroi ಏನಿದೆಯೋ ಅದನ್ನು ನಮ್ಮ ದಕ್ಷಿಣ ಕನ್ನಡ ಜಿಲ್ಲೆಗೆ ತರಬೇಡಿ ಎಂದು ಅತಿ ವಿನಯದಿಂದ ಅರಿಕೆ ಮಾಡಿಕೊಳ್ಳುತ್ತೇನೆ. octroi ಇದುವರೆಗೂ ನಮ್ಮಲ್ಲಿಲ್ಲ. ಈ ಸಭೆಯಲ್ಲಿ ಇತರರಿಗೆ ಅದು ಬೇಡವಾದರೂ, ಬೇಕಾದರೂ ನಮಗೆ ಬೇಡ. ಇದರ ಬದಲು ಬೇರೆ ತೆರಿಗೆಗಳನ್ನು ಹಾಕಿ.

(ಶ್ರೀ ಎ. ಕೃಷ್ಣಶೆಟ್ಟಿ)

ಲಂಡನ್ ಮುಂತಾದ ಪಟ್ಟಣಗಳಲ್ಲಿ ಮಾರ್ಗಗಳು ಬಹಳ ಅಗಲವಾಗಿವೆ. ಅದೇ ಹೊತ್ತಿಗೆ ನಮ್ಮಲ್ಲಿಯೂ ಕೂಡ ಆ ಪರಿಸ್ಥಿತಿ ಬಂದೊದಗುತ್ತದೆ. ನಮ್ಮ ಸಮಾಜಕ್ಕೆ ಅನುಕೂಲವಾಗಲು ಈಗ ನಾವು ಯೋಜನೆಯ ರೂಪದಲ್ಲಿ ಪ್ರೋಗ್ರಾಂ ಹಾಕಿಕೊಂಡು, ಒಂದು 'ಪ್ಲಾನ್' ಇಟ್ಟುಕೊಂಡು ಅದರ ಪ್ರಕಾರ ಕೆಲಸ ಮಾಡುತ್ತಿದ್ದೇವೆ. ಮುನಿಸಿಪಾಲಿಟಿಗಳಿಗೆ ಕೂಡ ಪ್ರಾಂತದ ಮಟ್ಟದಲ್ಲಾಗಲೂ ಒಂದು ಯೋಜನಾ ಸಮಿತಿಯನ್ನಿಟ್ಟುಗೊಂಡು ಅದರ ಸಲಹೆ ಪ್ರಕಾರ ಕೆಲಸ ಮಾಡಬೇಕು. ಇವು ಉಪದೇಶ ಮಂಡಲಿಗಳಾಗಿ ವರ್ತಿಸಿಕೊಂಡು, ಮುನಿಸಿಪಾಲಿಟಿಗಳ ಅಭಿವೃದ್ಧಿ ಯೋಜನಾಬದ್ಧವಾಗಿ ನಡೆಯುವುದಕ್ಕೆ ಮಾರ್ಗದರ್ಶನವಾಗತಕ್ಕ ಒಂದು ಅವಕಾಶವನ್ನು ಇದರಲ್ಲಿ ಕಲ್ಪಿಸಿ ಕೊಡಬೇಕು.

ಸ್ವಿಟ್‌ಜರ್ಲೆಂಡಿನಲ್ಲಿ friends of the city ಎನ್ನತಕ್ಕಂಥ ಒಂದು ಸಲಹಾ ಮಂಡಲಿ ಅಲ್ಲಿನ ನಗರಾಡಳಿತದಲ್ಲಿತ್ತು. ಆ ರೀತಿ ನಮ್ಮ ನಗರದ ಆಡಳಿತದಲ್ಲೂ ಒಂದು ಸಮಿತಿ ಇರಬೇಕು. ಆಯಾಯ ಕಾಲಕ್ಕೆ ತಕ್ಕ ಸಲಹೆಗಳನ್ನು ಕೊಡಲು ಅಂಥ ಒಂದು ಸಲಹಾ ಸಮಿತಿ ಇಲ್ಲಿಯೂ ಇರಬೇಕು. ಸಾಧ್ಯವಾದ ಮಟ್ಟಿಗೆ ಆ ರೀತಿ ಆಗುವುದಾದರೆ, ನಿಜವಾಗಿಯೂ ಸಾಂಸ್ಕೃತಿಕ ಭಾಗದಲ್ಲಿ ನಾಗರೀಕ ಸಮಾಜಕ್ಕೆ ಯಾವ ರೀತಿ ಸೌಕರ್ಯಗಳನ್ನು ಒದಗಿಸಿ ಕೊಡಬಹುದು ಎಂಬುದನ್ನು ಪರಿಶೀಲಿಸಲು ಉಪದೇಶ ಮಂಡಲಗಳು ಅಲ್ಲಲ್ಲಿ ಕೆಲಸ ಮಾಡುವುದು ಅಗತ್ಯ. ಆ ರೀತಿ ಈ ಕಾನೂನಿನಲ್ಲಿ ಎಲ್ಲೂ ಕಾಣುತ್ತಿಲ್ಲ.

ಇನ್ನು ಕಂಟ್ರೋಲಿಂಗ್ ಅಥಾರಿಟಿ ಬಗ್ಗೆ ಇದರಲ್ಲಿ ನನಗೆ ಕಾಣಿಸುವುದು ಎಂದರೆ ಡಿವಿಜನಲ್ಲು ಕಮಿಷನರ ಕಡೆಗೆ ಅಷ್ಟು ಅಧಿಕಾರ ಇರುವುದನ್ನು ನೋಡಿದರೆ ಇದರ ಮೂಲವೇನೆಂಬುದೇ ನನಗೆ ಅರ್ಥವಾಗುತ್ತಿಲ್ಲ. ಅಧಿಕಾರ ವಿಕೇಂದ್ರೀಕರಣ ಮಾಡಬೇಕು, ಪ್ರಜಾ ಪ್ರಭುತ್ವದ ಮೇಲೆ ಆಡಳಿತ ನಡೆಸುವ ಸಲುವಾಗಿ ಸಾಧಾರಣ ಜನರ ಕೈಯಲ್ಲಿ ಅಧಿಕಾರ ಕೊಡಬೇಕೆಂದು ಬಾಯಲ್ಲಿ ಹೇಳುತ್ತಾರೆಯೇ ಹೊರತು, ಜನರ ಕೈಯಲ್ಲಿ ಅಧಿಕಾರವನ್ನು ಕೊಡುವಂತಹದೇನೂ ಈ ಕಾನೂನಿನಲ್ಲಿ ಉಳಿದಿರಲಿಕ್ಕಿಲ್ಲ. ಇಲ್ಲಿ ಹೇಳಿರುವ ಅಧಿಕಾರವನ್ನೆಲ್ಲಾ ಸರ್ಕಾರ ಡೆಪ್ಯುಟಿ ಕಮಿಷನರುಗಳ ಕೈಯಲ್ಲೇ ಕೊಟ್ಟಿದೆಯೇ ಹೊರತು ಜನರ ಕೈಲಿ ಅಧಿಕಾರ ಕೊಡುತ್ತೇನೆಂದು ಮುಂದಿನ ಕೈಲಿ ಬೆಲ್ಲವನ್ನು ತೋರಿಸಿ, ಅನಂತರ ಹಿಂದಿನ ಕೈಲಿ ಕಸಿದುಕೊಳ್ಳುವ ರೀತಿಯಲ್ಲಿ ಈ ಕಾನೂನು ಮಾಡಿದ ಹಾಗೆ ಇದೆ.

ಮದ್ರಾಸಿನಲ್ಲಿ Inspector of Local Boards, ಎಂದು ಪ್ರತ್ಯೇಕವಾದ ಒಂದು ಬೋರ್ಡನ್ನು ಮಾಡಿ ಸ್ಥಳೀಯ ಸಂಸ್ಥೆಗಳನ್ನು ನೋಡಿಕೊಳ್ಳಲು ಆ ಬೋರ್ಡಿಗೆ ಎಲ್ಲ ಅಧಿಕಾರ ಕೊಡಲಾಗಿತ್ತು. ಆ ರೀತಿಯಾಗಿ ಇಲ್ಲಿಯೂ ಪ್ರತ್ಯೇಕವಾಗಿ ಸ್ಥಳೀಯ ಸಂಸ್ಥೆಗಳ ಆಡಳಿತವನ್ನು ನೋಡಿಕೊಳ್ಳುವಂತಹ ಒಂದು ಬೋರ್ಡನ್ನು ಮಾಡಿ ಅದಕ್ಕೆ ಸೂಕ್ತ ಅಧಿಕಾರಗಳನ್ನು ಕೊಡಬಹುದು. ತಾಲ್ಲೂಕು ಬೋರ್ಡುಗಳೂ ಪಂಚಾಯಿತಿ ಬೋರ್ಡುಗಳೂ ಹೇಗೆ ಪ್ರತ್ಯೇಕ ಪ್ರತ್ಯೇಕವಾಗಿ ಕೆಲಸ ಮಾಡುತ್ತೇವೋ ಹಾಗೇ ಯಾವ ತರಹದಲ್ಲೂ ಬೇರೆ ಇಲಾಖೆಯ ಸಂಪರ್ಕಕ್ಕೆ ಆಸ್ಪದವಿಲ್ಲದಂತೆ ಸ್ಥಳೀಯ ಸಂಸ್ಥೆಗಳನ್ನೇ ಒಂದು ಪ್ರತ್ಯೇಕವಾದ ಸಂಸ್ಥೆಯಾಗಿ ಇಟ್ಟುಕೊಳ್ಳುವುದು ಅಗತ್ಯ. ಆ ರೀತಿ ಮಾಡಿದಲ್ಲಿ ನಿಜವಾಗಿಯೂ ಒಳ್ಳೆಯ ರೀತಿಯಲ್ಲಿ ಕೆಲಸವಾದೀತು. ಈ ಕಾನೂನಿನಲ್ಲಿ ಎಲ್ಲಿ ನೋಡಿದರೂ ಎಲ್ಲ ಅಧಿಕಾರಗಳನ್ನು ಡೆಪ್ಯುಟೀ ಕಮಿಷನರ ಕಡೆಗೇ ಕೊಡಲಾಗಿದೆ. ಅಂಥ ಅವಕಾಶಗಳು ತುಂಬಾ ಬರುತ್ತವೆ. ಅಂಥಾದ್ದಕ್ಕೆ ಅವಕಾಶವಿಲ್ಲದ ಹಾಗೆ ಈ ಸಂಸ್ಥೆಗಳ ಆಡಳಿತ ವ್ಯವಸ್ಥೆಯನ್ನು ನಡೆಯಲು ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಮುನಿಸಿಪಾಲಿಟಿಗಳಲ್ಲಿರತಕ್ಕ ಸ್ಲಂಸ್ ಕ್ಲಿಯರೆನ್ಸ್ ಬಗ್ಗೆ ನಮ್ಮ ಪ್ರಧಾನ ಮಂತ್ರಿಗಳು ಪ್ರಸ್ತಾಪಿಸುತ್ತಾ ಒಂದು ಸಾರಿ ಪಟ್ಟಣಗಳಲ್ಲಿರತಕ್ಕ ಸ್ಲಂಸನ್ನು ಅದೂ ಒಂದು ರೀತಿಯ Scandalous ಎಂದು ಹೇಳಿದ್ದಾರೆ. ಬೊಂಬಾಯಿ ಪಟ್ಟಣ ತೆಗೆದುಕೊಳ್ಳಿ. ಅಥವಾ ಬೇರೆ ಯಾವ ನಗರವನ್ನಾದರೂ ತೆಗೆದುಕೊಳ್ಳಿ ಅಲ್ಲಿ Slum clearance ಗೆ ಪ್ರಾಧಾನ್ಯತೆ ಕೊಟ್ಟಿರುವಂಥ ಒಂದು ಪ್ರಾವಿಷನ್ ಎಲ್ಲೂ ಕಾಣಲಿಲ್ಲ. ಮುಖ್ಯವಾಗಿ ಈ ಕಾನೂನಿನಲ್ಲಿ ನಾವು ಕಾಣುವುದು ಸಾಧಾರಣವಾಗಿ ಜನತೆಯ ಕೈಯಲ್ಲಿ ಅಧಿಕಾರ ಕೊಡುವ ಬದಲು ಎಲ್ಲವನ್ನೂ ಸರ್ಕಾರ ತನ್ನ ಕೈಯಲ್ಲೇ ಇಟ್ಟುಕೊಂಡಿರುವಂತೆ ಕಾಣುತ್ತದೆ. ಬಾಯಲ್ಲಿ ಮಾತ್ರ ದೊಡ್ಡದಾಗಿ ಈ ಸಂಸ್ಥೆಗಳ ಆಡಳಿತವನ್ನು ಜನರ ಕೈಯಲ್ಲೇ ಕೊಡುತ್ತೇವೆಂದು ಹೇಳುತ್ತಾರೆ. ಪಟ್ಟಣಗಳಲ್ಲಿರುವ ಜನಕ್ಕೆ ಸೌಕರ್ಯಗಳನ್ನು ಕೊಡುವುದು ಪ್ರಜಾ ಪ್ರಭುತ್ವದ ಒಂದು ಸಂಪ್ರದಾಯ. ಜನರ ಕೈಗೆ ಅಧಿಕಾರವನ್ನು ಈ ಬಿಲ್ಲಿನಲ್ಲಿ

ಕೊಡದೆ ಇರುವುದರಿಂದ ಸರಕಾರ ಇದನ್ನು ವಾಪಸು ತೆಗೆದುಕೊಂಡು ಒಂದು ಸಮಗ್ರವಾದ ಜನರಿಗೆ ಅಧಿಕಾರವನ್ನು ಕೊಡುವಂಥ ಹಾಗೂ ಪ್ರಜಾ ಪ್ರಭುತ್ವದ ತತ್ವಕ್ಕನುಗುಣವಾಗುವ ರೀತಿಯಲ್ಲಿ ಸಮಾಜವಾದದ ತತ್ವ ಪೂರ್ಣವಾಗಿ ದುರುಪಯೋಗವಾಗದ ರೀತಿಯಲ್ಲಿ ಕೆಲಸಮಾಡುವಂತಹ ಕಾನೂನನ್ನು ತರಬೇಕೆಂದು ಹೇಳಿ ನನ್ನ ಈ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಕೆ. ಎಸ್. ಗೌಡಯ್ಯ (ಕೃಷ್ಣರಾಜನಗರ).—ಸ್ವಾಮಿ, ಈ ಪೌರಸಭೆಯ ವಿಧೇಯಕ ಬಹಳ ಸ್ವಾಗತಾರ್ಹವಾದದ್ದು. ಮೈಸೂರು ದೇಶಕ್ಕೆ ಹೊಸದಾಗಿ ಬಂದಿರುವ ಭಾಗಗಳ ವಿಧೇಯಕಗಳನ್ನು ಒಂದುಗೂಡಿಸಿ ಈಗ ಒಂದು ಯೂನಿಫಾರಂ ಮಸೂದೆಯನ್ನು ತಯಾರಿಸಿ ನಮ್ಮ ಮುಂದೆ ತಂದಿರುವುದರಿಂದ ಮುಂದೆ ಈ ಮುನಿಸಿಪ್ಯಾಲಿಟಿಗಳ ಆಡಳಿತ ಪರಿವರ್ತನೆ ಹೊಂದಿ ಈ ಸಂಸ್ಥೆಯ ಕೆಲಸಕಾರ್ಯಗಳು ಬಹಳ ಯಶಸ್ವಿಯಾಗಿ ನಡೆಯುತ್ತವೆಂದು ನಾನು ಹೇಳುತ್ತೇನೆ. ನಮ್ಮ ಮೈಸೂರು ದೇಶದಲ್ಲಿ ಸುಮಾರು ಕಾಲು ಭಾಗ ಅಥವಾ ಮೂರನೇ ಒಂದು ಭಾಗದಷ್ಟು ಜನರು ನಗರದ ಆಡಳಿತದ ವ್ಯವಸ್ಥೆಗೆ ಒಳಪಟ್ಟಿರುವುದರಿಂದ ಅಂಥ ಸಂಸ್ಥೆಗಳ ಸುತ್ತಮುತ್ತಲಿನ ಹಳ್ಳಿಗಾಡಿನ ಪ್ರದೇಶಗಳಿಗೂ ಕೂಡ ಇದರಿಂದ ಒಂದು ಪ್ರಯೋಜನ ದೊರೆಯುತ್ತಿದೆ. ಆದುದರಿಂದ ಈ ಇಲಾಖೆ ಹೆಚ್ಚು ಕಡಿಮೆ ಒಟ್ಟು ದೇಶದ ಜನರ ಆಗುಹೋಗುಗಳನ್ನು ನಿರ್ಧರಿಸತಕ್ಕ ಇಲಾಖೆಯಾಗುತ್ತದೆ ಎಂದು ನಾನು ಇಲ್ಲಿ ಹೇಳಬಯಸುತ್ತೇನೆ.

ಸೆಕ್ಷನ್ನು 341ರಲ್ಲಿ Local Government Establishment fund ಎಂಬುದಾಗಿ ಒಂದು ನಿಧಿಯನ್ನು ಮಾಡಲು ಅವರೇ ಮಾಡಿದ್ದಾರೆ. ಇದು ಸ್ವಾಗತಾರ್ಹವಾದುದು.

ಸೆಕ್ಷನ್ನು 310–311ರಲ್ಲಿ ಮುನಿಸಿಪಾಲಿಟಿಗಳಿಗೇ ಹೆಚ್ಚಿನ ಅಧಿಕಾರ ಕೊಟ್ಟಿದ್ದಾರೆ. ಈ ಹಿಂದೆ 1951ರಲ್ಲಿದ್ದ ಆಕ್ಟಿನಲ್ಲಿ ಮುನಿಸಿಪಾಲಿಟಿಗಳಿಗೆ ಇಷ್ಟು ಹೆಚ್ಚಿನ ಅಧಿಕಾರ ಕೊಟ್ಟಿರಲಿಲ್ಲ. ಆಗ ಮುನಿಸಿಪಾಲಿಟಿಗಳನ್ನು ಕಡೆಗಣ್ಣಿನಿಂದ ಕಾಣತಕ್ಕ ಒಂದು ಅವಕಾಶವಿತ್ತು. ಈಗ Chief Officersರವರಿಗೇನೆ ಜನರಲ್ ಕಂಟ್ರೋಲಿನ ಆಡಳಿತ ಕೊಟ್ಟಿರುವುದು ನಿಜವಾಗಿಯೂ ಒಂದು ವಿಧದಲ್ಲಿ ಪ್ರಗತಿದಾಯಕವಾದ ಹೆಜ್ಜೆಯೆಂದು ನಾನು ಹೇಳುತ್ತೇನೆ, ಹೇಗೆಂದರೆ ಚೀಫ್ ಆಫೀಸರುಗಳಿಗೇನೆ ಹೆಚ್ಚಿನ ಅಧಿಕಾರವನ್ನು ಕೊಟ್ಟಿದ್ದಾರೆ. ಇದಕ್ಕೆ ಕೆಲವರು ಆಕ್ಷೇಪಣೆ ಮಾಡಬಹುದು. ಚೀಫ್ ಆಫೀಸರಾಗಿರುವವರು ಈಗ ಹೆಚ್ಚಾಗಿ ತರಬೇತಿ ಹೊಂದಿ ಅನುಭವ ಹೊಂದಿರುವುದರಿಂದ ಸರಿಯಾದ ಅಧಿಕಾರವನ್ನು ಚಲಾಯಿಸುವಂತಿದ್ದರೆ ನಿಜವಾಗಿಯೂ ಆಡಳಿತ ಚೆನ್ನಾಗಿ ನಡೆಯುತ್ತದೆ. ಇದರಲ್ಲಿ ಯಾವ ರಾಜಕೀಯಕ್ಕೂ ಅಷ್ಟು ಹೆಚ್ಚಿನ ಅವಕಾಶವಿಲ್ಲ. ಆದರೆ ಇದನ್ನು ಜಾರಿಗೆ ತರುವುದರಲ್ಲಿ ಸ್ವಲ್ಪ ತೊಂದರೆಗಳಿರುವುದನ್ನು ಸರಿಪಡಿಸಿದರೆ ಸಿಟಿ ಮುನಿಸಿಪಾಲಿಟಿಗಳಿಗೆ ಸ್ವಲ್ಪ ಅನುಕೂಲವಾದೀತು ಎಂದು ನನಗೆ ತೋರುತ್ತದೆ. ಇದರಿಂದ ಈಗಿರುವ ಸಣ್ಣ ಸಣ್ಣ ಮುನಿಸಿಪಾಲಿಟಿಗಳಿಗೆ ಅಲ್ಲಿನ ಆಡಳಿತ ಮಾಡುವ ಜನಕ್ಕೆ ತೊಂದರೆಯಾಗುತ್ತದೆಂದು ಮುನಿಸಿಪಾಲಿಟಿಯ ಆದಾಯ ದೃಷ್ಟಿಯಿಂದ ಬದಲಾವಣೆಯಾಗಬೇಕಾಗಿರುತ್ತದೆ. ಸಣ್ಣ ಸಣ್ಣ ಮುನಿಸಿಪಾಲಿಟಿಯ ಆಶ್ರಯದಲ್ಲಿ ವಾಸಮಾಡತಕ್ಕ ಜನರು ಬಹಳ ಬಡವರಾಗಿವವರು, ಅವರಿಗೆ ನಾನಾ ಮಾರ್ಗಗಳಿಂದ ಉತ್ಪತ್ತಿ ಬರುವುದಿಲ್ಲ, ಕೇವಲ ಒಂದೆರಡು ಮಾರ್ಗಗಳಲ್ಲಿ ಮಾತ್ರ ಅವರಿಗೆ ಉತ್ಪತ್ತಿ ಬರುತ್ತದೆ. ಆದರಿಂದ ಈ ಬಿಲ್ಲಿನ ಷೆಡ್ಯೂಲಿನಲ್ಲಿ ಕೊಟ್ಟಿರತಕ್ಕ ಕೆಲಸಗಳಿಗೆಲ್ಲ ಹಣ ಒದಗಿಸಬೇಕೆಂದು ಒತ್ತಾಯಪಡಿಸಿದರೆ, ಅವರಿಗೆ ತೊಂದರೆಯಾಗುತ್ತದೆ. ಅದರಂತೆ Maximum Rates ಗಳನ್ನು ಸಣ್ಣ ಮುನಿಸಿಪಾಲಿಟಿಗಳು ಕೊಡುವಂತೆ ಒತ್ತಾಯಮಾಡಬಾರದೆಂದು ಈ ಸಂದರ್ಭದಲ್ಲಿ ನಾನು ಕೇಳಿಕೊಳ್ಳುತ್ತೇನೆ. ಸಕ್ಕರೆ, ಬೆಲ್ಲ, ಬೆಣ್ಣೆ, ಅಡಿಕೆ, ವೀಳೇದೆಲೆ ಮುಂತಾದ ಸಾಮಾನುಗಳ ಮೇಲೆ ಹೆಚ್ಚಾಗಿ ಆಕ್ಟ್ರಾಯ ಹಾಕಿದ್ದಾರೆ. ಇದರಲ್ಲಿ ಮುನಿಸಿಪಾಲ್ಟಿಗೆ ಒಂದು ತೊಂದರೆಯಿದೆ. ಈಗ ವ್ಯಾಪಾರಸ್ಥರು ನಗರದಿಂದ ಸಾಮಾನು ತರುತ್ತಾರೆ. ಈ ಆಕ್ಟ್ರಾಯಿಂದ ಆ ಸಾಮಾನುಗಳ ಬೆಲೆ ಹೆಚ್ಚಿಗೆಯಾಗುತ್ತದೆ. ಇದರಿಂದ ಮುಂದೆ ನಗರದಿಂದ ಸಾಮಾನುಕೊಳ್ಳುವುದು ಕಡಿಮೆಯಾಗಬಹುದು. ಗ್ರಾಮಾಂತರ ಪ್ರದೇಶದಲ್ಲಿರುವ ಅಂಗಡಿಗಳಿಂದಲೇ ಸಾಮಾನು ಕೊಂಡುಕೊಳ್ಳಲಿಕ್ಕೆ ಪ್ರಯತ್ನಮಾಡುತ್ತಾರೆ. ಇದರಿಂದ ಪೌರಸಭೆಗೆ ಬರತಕ್ಕ ಆದಾಯಕ್ಕೆ ತೊಂದರೆಯಾಗುತ್ತದೆ. ಆದುದರಿಂದ ಆಕ್ಟ್ರಾಯ ಏರಿಸುವುದನ್ನು ತಡೆಹಿಡಿಯಬೇಕು. ಮುನಿಸಿಪಲ್ ಆದಾಯಕ್ಕೆ ಧಕ್ಕೆಬಾರದಂತೆ ನೋಡಿಕೊಳ್ಳಬೇಕಾಗುತ್ತದೆ. ಸಣ್ಣ ಸಣ್ಣ ಊರುಗಳಲ್ಲಿ ವ್ಯಾಪಾರ ನಡೆದರೆ ನಗರಗಳಲ್ಲಿ ವ್ಯಾಪಾರ ಕಡಿಮೆಯಾಗುತ್ತದೆ. ಆದರಿಂದ ಮುನಿಸಿಪ್ಯಾಲಿಟಿಗಳ ವರಮಾನ ಸಹ ಕಡಿಮೆಯಾಗುತ್ತದೆ.

ಷೆಡ್ಯೂಲಿನಲ್ಲಿ ಮಣದ ಲೆಕ್ಕದ ಮೇಲೆ ಆಕ್ಟ್ರಾಯ ಹಾಕಿದ್ದಾರೆ. ಈಗಾಗಲೇ ದೇಶದಲ್ಲಿ ಮೆಟ್ರಿಕ್ ಸಿಸ್ಟಮ್ ಜಾರಿಗೆ ಬಂದಿದೆ. ಮಣದ ಲೆಕ್ಕ ಏಕೆ ಹಾಕಿದ್ದಾರೋ ಅರ್ಥವಾಗುವುದಿಲ್ಲ, ಮೆಟ್ರಿಕ್ ಸಿಸ್ಟಮ್ ಪ್ರಕಾರ ಅದು ಇರಬೇಕು. ಇದರಲ್ಲಿ ಸೂಕ್ತ ತಿದ್ದುಪಡಿ ಮಾಡಬೇಕೆಂದು ಕೇಳುತ್ತೇನೆ.

(ಶ್ರೀ ಕೆ.ಎಸ್. ಶಿಡಯ್ಯ)

ಮುನಸಿಪಲ್ ನೌಕರರ ಒಂದು ವಿಶಿಷ್ಟ ವರ್ಗವನ್ನು ನಿರ್ಮಾಣ ಮಾಡಿರುವುದು ನಿಜವಾಗಿಯೂ ಸ್ವಾಗತಾರ್ಹವಾದುದು. ಸರ್ಕಾರದವರೇ ನೇಮಕ ಮಾಡಬೇಕೆಂಬ ವಾದದಲ್ಲಿ ತಿರುಳಿಲ್ಲ. ಸರಕಾರದ ಕೇಡರದಿಂದ ಹೆಚ್ಚಾಗಿ ಜನ ಬರಬೇಕಾಗುತ್ತದೆ. ಆಡಳಿತವು ತೃಪ್ತಿಕರವಾಗಿ ನಡೆಯಬೇಕು. ಅದಕ್ಕೆ ಅವಕಾಶಮಾಡಿಕೊಟ್ಟಿದ್ದಾರೆ. 2/3 ಜನ ಸದಸ್ಯರು ಅಂಥಹ ಒಬ್ಬರನ್ನು ವರ್ಗಾಯಿಸಲು ನಿರ್ಣಯಮಾಡಿದರೆ, ಸರ್ಕಾರ ಅದನ್ನು ಗಮನಕ್ಕೆ ತೆಗೆದುಕೊಳ್ಳುವ ಅವಕಾಶ ಏದೆ. ಯಾವದೇ ಅಧಿಕಾರಿಯಿಂದ ತೊಂದರೆಯಾಗುತ್ತದೆಂದು ನನಗೆ ಅನಿಸುವುದಿಲ್ಲ. ಈ ದೃಷ್ಟಿಯಿಂದ ಬೇರೆ ಒಂದು ವಿಶಿಷ್ಟವರ್ಗವನ್ನು ಮಾಡಿರುವುದು ಸ್ವಾಗತಾರ್ಹವಾದುದು, ಇದರಿಂದ ಪೌರ ಸಭೆಗಳಿಗೆ ಯೋಗ್ಯ, ದಕ್ಷರಾದ ಮತ್ತು ಅನುಭವವುಳ್ಳ ಅಧಿಕಾರಿಗಳು ಸಿಕ್ಕುತ್ತಾರೆ.

ಈ ಸಮಯದಲ್ಲಿ ಕೆಲವು ಬೇಡಿಕೆಗಳನ್ನು ತಮ್ಮ ಮುಂದೆ ಇಡಲು ಬಯಸುತ್ತೇನೆ. ಈ ಸೂಚನೆಗಳನ್ನು ಮಸೂದೆಯಲ್ಲಿ ಅಳವಡಿಸಲು ಸಾಧ್ಯವಾಗುವುದೇ ಎಂಬುದು ಗೊತ್ತಿಲ್ಲ. ಜಮಿೀನು ಕಂದಾಯದಲ್ಲಿಯ ಒಂದು ಭಾಗ ಗ್ರಾಮಪಂಚಾಯಿತಿಗಳಿಗೆ ಕೊಡಲಾಗುತ್ತದೆ. ಅದೇರೀತಿ ಮುನಿಸಿಪಾಲ್ಟಿ ಇರುವ ಊರುಗಳಲ್ಲಿ, ಆ ಊರಿನ ಜಮೀನು ಕಂದಾಯದಲ್ಲಿಯ ಒಂದು ಭಾಗ ಅವರಿಗೆ ಕೊಡುವ ಅವಕಾಶ ಮಾಡಿಕೊಡಬೇಕು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಕಟ್ಟಡಗಳ ಮೇಲೆ ತೆರಿಗೆ ವಿಧಿಸುವುದಕ್ಕೆ ಮುನಿಸಿಪಾಲಿಟಿಗಳಿಗೆ ಅಧಿಕಾರ ಕೊಡಬೇಕು. ಮೋಟಾರು, ವಾಹನಗಳ ಮೇಲೆ ತೆರಿಗೆ ವಸೂಲ್ಮಾಡಲು ಸರಕಾರಕ್ಕೆ ಅಧಿಕಾರವಿದೆ. ಸರಕಾರ ವಸೂಲ್ಮಾಡುವುದರಿಂದ ಮುನಸಿಪಾಲಿಟಿಯವರಿಗೆ ಏನು ನಷ್ಟವಾಗುತ್ತದೆಯೋ ಅದಕ್ಕೆ ಅನುಗುಣವಾಗಿ ಪರಿಹಾರ ಕೊಡಬೇಕು. ಬಸ್‌ಟ್ಯಾಂಡ್ ಕಟ್ಟಿಸುವುದರಿಂದ ಮುನಿಸಿಪಾಲ್ಟಿಗೆ ಹೆಚ್ಚು ವರಮಾನ ಬರುತ್ತದೆ. ಬಸ್ಸುಗಳ ಮೇಲೆ ತೆರಿಗೆ ವಸೂಲ್ಮಾಡಲು ಬರುವ ಹಾಗೆ ಇದರಲ್ಲಿ ಅಳವಡಿಸಬೇಕು ಎಂದು ಹೇಳುತ್ತೇನೆ. ಮನರಂಜನೆ ತೆರಿಗೆಯನ್ನು ವಸೂಲ್ಮಾಡುತ್ತಾರೆ. ಅದರಲ್ಲಿ ಸ್ವಲ್ಪ ಭಾಗವನ್ನು ಮುನಸಿಪಾಲಿಟಿಗೆ ಕೊಡಲು ಅವಕಾಶವಿದೆ. ಈ ಮನರಂಜನೆ ತೆರಿಗೆ ವಸೂಲ್ಮಾಡುವದರಲ್ಲಿ ಏನಾದರೂ ನ್ಯೂನತೆಗಳಿದ್ದರೆ ಅದನ್ನು ಸರಿಪಡಿಸಿ ವಸೂಲ್ಮಾಡಲು ಅವಕಾಶ ಮಾಡಿ ಕೊಡಬೇಕು ಎಂದು ಹೇಳುತ್ತೇನೆ. ಇದಲ್ಲದೆ ಸೇಲ್ಸ್‌ಟ್ಯಾಕ್ಸ್‌ನಲ್ಲಿ ಒಂದು ಸೂಕ್ತ ಪಾಲು ಮುನಿಸಿಪಾಲ್ಟಿಗೆ ಕೊಡಬೇಕೆಂದು ಸೂಚನೆ ಮಾಡುತ್ತೇನೆ. ಕುಡಿಯುವ ನೀರಿನ ಸರಬರಾಜು ಮತ್ತು ವಿದ್ಯುತ್‌ಶ್ಚಕ್ತಿ ಪೂರೈಕೆ ಇವುಗಳಿಗಾಗಿ ಮುನಸಿಪಾಲ್ಟಿಗೆ ಖರ್ಚು ಹೆಚ್ಚಾಗಿದೆ. ಬೇರೆ ಕಡೆ ಪಾವರ್‌ಗಾಗಿ ಏನು ರೇಟು ವಸೂಲ್ಮಾಡುತ್ತೀರೋ ಅದನ್ನೇ ಮುನಸಿಪಾಲ್ಟಿಗೆ ಅನ್ವಯಿಸುವುದರಿಂದ ಖರ್ಚು ಬಹಳ ಹೆಚ್ಚಾಗುತ್ತಿದೆ. ಕುಡಿಯುವ ನೀರು ಮತ್ತು ಎಲೆಕ್ಟ್ರಿಕ್ ಪಾವರ್ ಇವುಗಳಿಗಾಗಿ ಕನ್‌ಸಿಷನ್ ರೇಟ್ ಕೊಡುವ ಏರ್ಪಾಡು ಮಾಡಬೇಕು.

ಕೆಲವು ಊರುಗಳ ಮಧ್ಯ ಭಾಗದಲ್ಲಿ P.W.D. ರಸ್ತೆ ಹಾದು ಹೋಗುವುದರಿಂದ ಆ ರಸ್ತೆ ದುರಸ್ತಿ ಮಾಡತಕ್ಕದ್ದು P.W.D. ಅವರ ಕರ್ತವ್ಯ. ಆ ರಸ್ತೆಯಲ್ಲಿ ಊರಿನವರಷ್ಟೇ ತಿರುಗಾಡುವುದಿಲ್ಲ. ಅದು ಸ್ಟೇಟ್ ಫಂಡ್ ರಸ್ತೆಯಾಗಿರುವುದರಿಂದ ಅನೇಕ ವಾಹನಗಳು ಬೇರೆ ಜನರು ಸಹ ಓಡಾಡುತ್ತಾರೆ. ಊರಿಗೆ ಸಂಬಂಧಪಡದೇ ಇರತಕ್ಕಂಥ ವಾಹನಗಳು ಓಡಾಡುತ್ತವೆ. ಇಂಥ ರಸ್ತೆಗಳಿಗೆ P.W.D. ಇಲಾಖೆಯವರು ಲೈಟ್ ಒದಗಿಸಿಕೊಡಬೇಕು ಮತ್ತು ಮೈಂಟೇನ್ ಮಾಡಬೇಕು. ರಸ್ತೆ ಕೆಟ್ಟುಹೋದರೆ P.W.D. ಇಲಾಖೆಯವರು ದುರಸ್ತಿಮಾಡಿ ಮೈಂಟೇನ್ ಮಾಡುವ ಹಾಗೆ ಅವಕಾಶ ಮಾಡಿಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ. ನಾನು ಹೇಳಿದ ಇಷ್ಟು ಸೂಚನೆಗಳನ್ನು ಗಮನಕ್ಕೆ ತೆಗೆದುಕೊಳ್ಳಬೇಕು ಎಂದು ಕೇಳಿಕೊಳ್ಳುತ್ತೇನೆ. ಇಷ್ಟು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

Sri V. S. PATIL (Belgaum City).—Sir, this is one of the most important Bills on which some other Members also are desirous to speak. This Bill is practically going to the root of the Local Self-Government and that is why several other members want to speak on this Bill. I think the Government will not object to extend the discussion by a few more minutes.

Mr. SPEAK

concern to see w

did not fix any time limit, I gave chance to Members without any time limit. I have been carrying on in conjunction with the hon. Members as far as possible in regard to this Bill.

4-00 P. M.

Sri V. S. PATIL.—We have to look to the importance of the Bill.

Mr. SPEAKER.—That is why I called the whips of this and that party—I do not want to name them—and discussed the matter.

Sri V. S. PATIL.—The Bill is a big one and it is impossible to go through all its provisions during discussions. Even at the time the Business body's report was before this House I pleaded for more time for this Bill. At the time the Chair was pleased to say that the matter would be considered at the appropriate time.

Mr. SPEAKER.—I have no objection, if the Government has no objection.

Sri K. PUTTASWAMY.—As you are aware, the House is scheduled to meet tomorrow and the day-after. I am anxious that the house should finish the work before it. But out of deference to the wishes of Sri V. S. Patil I would suggest that you may be pleased to allot half-an hour more.

Mr SPEAKER.—Half-an-hour is within my discretion. I have no objection to extend it by half-an-hour.

Sri V. S. PATIL.—The Minister has conceded half-an-hour and the Chair may use discretion and allow another half-an-hour.

Mr. SPEAKER.—There must be an end to this bargaining, somewhere. Now Sri G. V. Gowda will speak but only for 15 minutes.

Sri G. V. GOWDA (Palya).—It is difficult for me to finish within 15 minutes. If I go clause-by-clause it would take much more time.

Mr. SPEAKER.—I cannot help it. There are so many members who wish to speak. Sri Deo.....

Sri V. M. DEO (Gubbi).—I require only 10 minutes.

Mr. SPEAKER.—Sri Deo will now speak for 10 minutes. Members have to be practical. I did not fix any time limit because Members did not want it then. I have now agreed for an extension by half-an-hour but we cannot go on like this.

† ಶ್ರೀ ವಿ. ಎಂ. ದೇವ್ (ಗುಬ್ಬಿ).—ಸ್ವಾಮಿ, ಅಧ್ಯಕ್ಷರೆ, ತಮ್ಮ ಮುಖಾಂತರ ಹೇಳುವುದು ಇಷ್ಟೇನೆ.

ಸೆಕ್ಷನ್ 231ರಲ್ಲಿ, Power to expel lepers and disturbers ಇದೆ. ಕೆಲವು ಕಾಲದ ಹಿಂದೆ ಕೇಂದ್ರ ಸರ್ಕಾರದಿಂದ ಇಲ್ಲಿಗೆ ಆದೇಶ ಬಂದಿದೆ. ಈ ಹೆಡಿಂಗ್‌ನಲ್ಲಿ lepers ಅನ್ನುವ ಪದವನ್ನೇ ಉಪಯೋಗಿಸುವುದಕ್ಕೆ ಬದಲು, persons suffering from leprosy ಅಂತ ಇರಬೇಕು. ಈ ಬದಲಾವಣೆಯನ್ನು ಮಾಡಬೇಕಾಗುತ್ತದೆ. ಇನ್ನೊಂದು ಏನೆಂದರೆ, ಈ ಲೆಪರ್ಸುಗಳನ್ನು ಸುಮ್ಮನೆ expel ಮಾಡುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ಅದಕ್ಕೆ ಬದಲಾಗಿ ಲೆಪರುಗಳನ್ನು ಇಂಥ ಜಾಗದಲ್ಲಿದ್ದಾಗ ಕಡ್ಡಾಯವಾಗಿ ಚಿಕಿತ್ಸೆಗೆ ಒಳಪಡಿಸುವುದಕ್ಕೆ ಇಂಥ ಜಾಗಕ್ಕೆ ಕಳುಹಿಸಬೇಕು ಅಂತ ಇದ್ದರೆ ಚೆನ್ನಾಗಿರುತ್ತಿತ್ತು ಅಂತ ನನಗನ್ನಿಸುತ್ತದೆ.

ಮುನಿಸಿಪಲ್ ಕೌನ್ಸಿಲ್ಲಿನಲ್ಲಿ ಲೋಕಲ್ ಎಂ. ಎಲ್. ಎ. ಗಳನ್ನು, *ex-officio* ಮೆಂಬರಾಗಿ ಮಾಡುವುದು ಒಳ್ಳೆಯದು.

(ಶ್ರೀ ವಿ. ಎಂ. ದೇವ್)

ಗವರ್ನ್‌ಮೆಂಟಿನವರು ಮುನಿಸಿಪಲ್ ಕೌನ್ಸಿಲ್‌ನೊಳಗೆ ಪ್ರವೇಶ ಮಾಡುವುದಕ್ಕೆ ಬೇಕಾದಷ್ಟು ಅವಕಾಶ ಮಾಡಿಕೊಂಡಿದ್ದಾರೆ. ಈ ದೃಷ್ಟಿಯಿಂದ ಈ ಒಂದು ವಿಚಾರ ಬಹಳ ಮುಖ್ಯವಾದುದು ಎಂದು ನನಗೆ ಅನಿಸುತ್ತದೆ; ಆದ್ದರಿಂದ ಆ ವಿಚಾರದಲ್ಲಿ ಹೇಳಬಯಸುತ್ತೇನೆ. ಸ್ವಲ್ಪ ಕಾಲದ ಹಿಂದೆ ನೆಹರೂರವರು ಒಂದು ಆರ್ಟಿಕಲ್ ಬರೆದಿದ್ದಾರೆ. ತುರ್ತು ಪರಿಸ್ಥಿತಿಯಿಂದ ಇನ್ನೊಂದು ಸಾರಿ power conflict ಶುರುವಾದರೆ ಆಗ Central authority, tighten ಮಾಡುತ್ತೇವೆ ಎಂದು ಹೇಳಿದ್ದಾರೆ. ಆವಾಗ State's ಮಿನಿಸ್ಟರುಗಳಿಗೆಲ್ಲಾ ಪವರ್ ಜಾಸ್ತಿ ಇರುವುದಿಲ್ಲ. At one stroke all these Ministers will be immoblised. ಅದಕ್ಕೆ ಮುಖ್ಯವಾಗಿ ಕೊಡುವ ಕಾರಣಗಳು ಏನು ಅಂದರೆ ಸ್ಟೇಟುಗಳಲ್ಲಿ ಸರಿಯಾದ ಎಕಾನಮಿ ಮೆಷರ್ಸ್ ತೆಗೆದುಕೊಳ್ಳುತ್ತಾ ಇಲ್ಲ ವೆನ್ನುವುದು ಒಂದು ; ಇನ್ನೊಂದು ರೈಟ್ ರಿಆಕ್ಷನ್ ಡೆವಲಪ್ ಮಾಡುತ್ತಿದ್ದಾರೆ ಅನ್ನುವುದು. ನಾವು ಪ್ರತಿಯೊಂದನ್ನೂ ಮುಖ್ಯ ಅಂತ ತಿಳಿದುಕೊಂಡು ಸರಿಯಾಗಿ ನಡೆಸಿಕೊಂಡು ಹೋಗುವುದಕ್ಕೆ ಏನಾದರೂ ದಾರಿ ಮಾಡಿಕೊಳ್ಳಬೇಕು. ತಾವು ಡೈರೆಕ್ಟಾಗಿ ಪ್ರವೇಶ ಮಾಡುವುದಕ್ಕೆ ಹೋದರೆ, ರಾಜಕೀಯ ನಡೆಸುವುದಕ್ಕೆ ಬಂದಿರುವವರು ಎಂದಾಗುತ್ತದೆ, ನಿಷ್ಪಕ್ಷಪಾತ ದೃಷ್ಟಿಯಿಂದ ಮುನಿಸಿ ಪಾಲಿಟಿ ಆಡಳಿತವನ್ನು ಇಟ್ಟಿರುವುದು ಕಷ್ಟವಾಗುತ್ತದೆ. ಇದು ಇಷ್ಟು ವರ್ಷದ ಅನುಭವದಲ್ಲಿ ಆಗಲೇ ಶತಸ್ಸಿದ್ಧವಾಗಿದೆ.

ಈ ಒಂದು inspecting authority ಯನ್ನು ಇಂಡಿಪೆಂಡೆಂಟಾಗಿ ಮಾಡಿಬಿಟ್ಟು ಅವರು ಪ್ರತಿ ಯೊಂದು ಮುನಿಸಿಪಾಲಿಟಿಗೂ ಆಗಾಗ ವಿಸಿಟ್‌ಕೊಟ್ಟು ಸಲಹೆ ಚೆನ್ನಾಗಿ ಕೊಡಬೇಕು. ಅಲ್ಲದೇನೇ ಅವರು ಗವರ್ನ್‌ಮೆಂಟಿಗೆ ನೇರವಾಗಿ ತಿಳಿಸಬೇಕು. ಗವರ್ನ್‌ಮೆಂಟಿಗೆ ಕೈ ಹಾಕುವುದಕ್ಕೆ ಒಂದು ದಾರಿ ಇರಕೂಡದು. ಮುನಿಸಿಪಾಲಿಟಿ ಸರಿಯಾಗಿ ನಡೆಯದೆ ಕೆಟ್ಟಹೆಸರು ಬರುವುದು ಕೆಲಾಮಿಟಿ ಅಲ್ಲ,ಆದರೆ ದೇಶ ಹಾಳಾಗಿಹೋಗುತ್ತದೆ. ಆ ದೃಷ್ಟಿಯಿಂದ ಈ ಒಂದು inspecting authorityಗೆ wide powers ಕೊಟ್ಟಿರಬೇಕು. ಈ ಲೋಕಲ್ ಮುನಿಸಿಪಾಲಿಟಿಗಳಿಗೆ ಲೆಕ್ಕ ಇಡುವುದು, ಡೆಲಿಬ- ರೇಷನ್ಸ್ ಕಂಡಕ್ಟ್ ಮಾಡುವುದು ಮುಂತಾದುವಲ್ಲಿ, ಅವರಿಗೆ ಎಷ್ಟುಮಟ್ಟಿಗೆ ಅಡ್‌ವೈಸ್ ಕೊಡ ಬೇಕೋ ಅಷ್ಟನ್ನೂ ಇನ್‌ಸ್ಪೆಕ್ಟ್ ಮಾಡಿಕೊಡಬೇಕು, ಮಾಡಿ ಇನ್‌ಸ್ಪೆಕ್ಷನ್ ರಿಪೋರ್ಟಿನ ಒಂದು ಕಾಪಿ ಯನ್ನು, ಆ ವರದಿ ಮೇಲೆ ಏನು ಆಕ್ಷನ್ ತೆಗೆದುಕೊಳ್ಳಬೇಕೋ ಅದನ್ನು ಸೂಚಿಸಿ, ಗವರ್ನ್‌ಮೆಂಟಿಗೆ ನೇರವಾಗಿ ಕಳುಹಿಸಬೇಕು. It must be incumbent upon them to act on those recommendations. ಈ ತರಹ ಮಾಡಿಕೊಳ್ಳಿ,ನೀವು ಕೈ ಹಾಕಿದರೆ ಇಲ್ಲಿ ಚೆನ್ನಾಗಿಲ್ಲ ಅಲ್ಲಿ ಚೆನ್ನಾಗಿಲ್ಲ ಅಂದರೆ ನಿಮಗೆ ಒಂದು ಇಂಟರೆಸ್ಟ್ ಇದೆ, ಈ ತರಹ ಮಾಡುತ್ತಾ ಇದ್ದೀರಿ ಎಂದು ಅಭಿ ಪ್ರಾಯ ಬರುತ್ತದೆ. ಇದು ಆಳವಾಗಿ ಯೋಚನೆ ಮಾಡಬೇಕಾದ ವಿಚಾರ. ಇದುವರೆಗೆ 15 ವರ್ಷ ದಿಂದ ಆಡಳಿತ ಮಾಡಿದ್ದೀರಿ. ನಿಮಗೆ ಆಡಳಿತ ಮಾಡುವುದಕ್ಕೆ ಅರ್ಹತೆ ಇಲ್ಲ ಎಂದು ಅನ್ನಿಸಿಕೊಂಡಿ ರುತ್ತೀರಿ, ನಿಮ್ಮ ಆ ಅನರ್ಹತೆಯನ್ನು ಸರಿಮಾಡಿಕೊಳ್ಳದೆ, ಬೇರೆಯವರದು ಸರಿಮಾಡುತ್ತೇವೆಂದು ಹೊರಟರೆ ನಗೆಪಾಟಲು ಆಗುತ್ತದೆ. ಇನ್ನೊಂದುಸಾರಿ ಕಾರಣಗಳನ್ನು ಹೇಳುತ್ತೇನೆ. ಮೊದಲನೆ ಯದಾಗಿ ಆಡಳಿತ ಮಾಡುವುದಕ್ಕೆ ಅರ್ಹತೆ ಕಳೆದುಕೊಂಡಿದ್ದೀರ. ಎರಡನೆಯದಾಗಿ ನೀವು ಒಂದು ಪೊಲಿಟಿಕಲ್ ಪಾರ್ಟಿಗೆ ಸೇರಿ ಆಡಳಿತ ಮಾಡುವುದಕ್ಕೆ ಬಂದಿದ್ದೀರಿ. ಈ ದೃಷ್ಟಿಯಿಂದ, ಒಂದು ತರಹ objective analysis ನಿಮಗೆ ಬರುವುದಿಲ್ಲ.

ಶ್ರೀ ಕೆ. ಪುಟ್ಟಸ್ವಾಮಿ.—ನಿಮ್ಮ ಅಭಿಪ್ರಾಯದಲ್ಲಿ.

ಶ್ರೀ ವಿ. ಎಂ. ದೇವ್.—ಮೈಸೂರು ಈಗ ಆರನೇ ಸ್ಥಾನಕ್ಕೆ ಹೋಗಿದೆ. ಮೈಸೂರು ಮಂತ್ರಿ ಗಳು ಅರ್ಹತೆಯನ್ನು ಕಳೆದುಕೊಂಡಿದ್ದಾರೆ, ಆದರೂ ನಿಮ್ಮನ್ನು ನಿಮ್ಮ ಸ್ಥಾನ ಬಿಟ್ಟುಹೋಗಿ ಎಂದು ಹೇಳುವುದಕ್ಕಾಗುವುದಿಲ್ಲ. ನೀವು ಅರ್ಹತೆ ಸಂಪಾದಿಸುವುದಕ್ಕೆ ಪ್ರಯತ್ನಪಡಬೇಕು ಅದಕ್ಕೆ ಕೆಲವು ಸಲಹೆಗಳನ್ನು ಕೊಡುವುದಕ್ಕೆ ಬಯಸುತ್ತೇನೆ.

ಇದರ ವಿಚಾರದಲ್ಲಿ ಲೋಕಲ್ ಅಡ್ವೈಸ್ ತೆಗೆದುಕೊಳ್ಳಿ. ಸರ್ಕಾರದವರೇ ನೇರವಾಗಿ ಮಾಡ ಬೇಕೆಂದರೆ ಇಂತಿಂಥಾ ವಿಚಾರಗಳನ್ನು ಇಂತಿಂಥಾ ಮುನಿಸಿಪಾಲಿಟಿಗಳು ಮಾಡಬೇಕು ಎಂದು ಹೇಳಿ ಅವರಿಗೆ ಕಾರ್ಯಕ್ರಮ ಕಳುಹಿಸಬೇಕು. ಹೀಗಿದ್ದು ಈ ಮೂಲಕ ಅದಕ್ಕೆ ಕೈ ಹಾಕಿದರೆ ಒಳ್ಳೆಯದಾಗುತ್ತದೆ. ಆಗ ಮುನಿಸಿಪಾಲಿಟಿಗಳಲ್ಲಿ ಇರತಕ್ಕ ನ್ಯೂನತೆಗಳನ್ನು ಸರಿಪಡಿಸುವುದಕ್ಕೆ ದಾರಿಯಾಗುತ್ತದೆ ಎಂದು ಹೇಳಿ ಇಷ್ಟು ಮಾತುಗಳನ್ನಾಡುವುದಕ್ಕೆ ಅವಕಾಶಕೊಟ್ಟ ಅಧ್ಯಕ್ಷರನ್ನು ವಂದಿಸಿ ಕುಳಿತುಕೊಳ್ಳುತ್ತೇನೆ.

†Sri ALLUM KARIBASAPPA (Kurugodu).—Mr. Speaker, Sir, Supporting the Bill, I should like to bring to the notice of the House and the Government a few amendments which are quite necessary in the Local Boards administration. According to the present Act, the general elections are conducted under the 'division' system, that is on an average four Councillors in each Division. In this system, I sincerely feel some undeserving elements are coming in and the administration is not going smoothly and efficiently. That is why I request the Government to amend the Act. According to the old Madras Act, that is 'ward-ward' system, *i.e.*, one candidate for each ward, certainly go candidates may come in and that is my humble opinion in this regard

There are so many officials who are not eligible and who are being posted as Health officers and Municipal Engineers to the Bellary Municipal Council. Since three years, no Health officer is being posted. The present officer is not at all qualified and at the same time, the Municipal Engineer also is not qualified. Bellary, being a City Municipal Council, I am extremely sorry why the Government has not taken action in this regard.

According to the present Act, the election of the President and the Vice-President is left to the discretion of the Municipal Council, either to hold elections yearly or once in four years. But, in many occasions, every Municipal Council make a resolution or come to a decision that the President and Vice-President should be elected every year. I want to bring to the notice of the House that this system is an entire failure. I should not say how many candidates, who are contesting for the Presidents and Vice-Presidents, will have to go out of the way to be elected every year and do so many fraud things to take the majority of the votes. It is advisable to have these elections once in four years. This is the only way by which we can have good administration. If yearly election is there, it will take at least two to three months to study the conditions, rules and regulations, and in the balance period of nine months it is not possible to cope up with the work. That is why an amendment to the Act is quite necessary.

As for Bellary, the comprehensive water scheme is almost completed. I am sorry, the under-ground drainage is not yet started. If this is not done early, the entire scheme will be a failure. I feel the difficulty, the water scheme comes under the Local-Self-Government Department and the under-ground drainage scheme comes under the Health Department. It is necessary that both these Schemes must be clubbed in one just like twin brothers. Otherwise, it will be a failure. I request the Government to consider this in the interest of sanitation of the towns and cities.

Regarding the Octroi, I find that in many of the Municipalities there is lot of leakage-between 25 to 30 per cent. In Bellary also, I am getting strong and reliable news, that there is leakage. That is why I request that a Special Officer should be posted for this Octroi Department with special staff to reduce this leakage and see that that sort of a thing is put down. Since Bellary Municipality is a Ciry Municipality

(SRI ALLUM KARIBASAPPA)

getting an income of more than Rs. 20 lakhs, I think it is quite necessary that an officer of the status of a Deputy Commissioner is posted as Municipal Commissioner.

Regarding the administration of Bellary Municipal Council, there are lot of irregularities and so many things which are now pending at the Government level, and I request that the Local-Self Government Minister should go through all the records, and if necessary, it is advisable to supersede the Municipal Council so that Bellary Town will be developed. As it is, at the present stage, it is impossible for the development of Bellary.

With these words, I thank the Speaker for having given me an opportunity to speak.

ಶ್ರೀ ಕೆ. ಪುಟ್ಟಸ್ವಾಮಿ.—ಅಧ್ಯಕ್ಷರೇ, ಸಭೆಯು ಕಳೆದ ಎರಡು ದಿವಸದಿಂದ ಈ ಮಸೂದೆಯ ಮೇಲೆ ಚರ್ಚೆಮಾಡಿ ಸಾಮಾನ್ಯವಾಗಿ ನೀಡಿರುವ ಸ್ವಾಗತಕ್ಕೆ ಮತ್ತು ಕೊಟ್ಟಿರುವ ಸಲಹೆಗಳಿಗೆ ನಾನು ಬಹಳ ಕೃತಜ್ಞನಾಗಿದ್ದೇನೆ. ನಾನು ಪ್ರಾರಂಭ ಭಾಷಣದಲ್ಲಿ ಹೇಳಿದ ಹಾಗೆ ಮೈಸೂರು ದೇಶದಲ್ಲಿ 7 ತರಹ ಕಾನೂನುಗಳು ಇದ್ದು ಪೌರಸಭೆಯ ಆಡಳಿತಕ್ಕೆ ಬಹಳ ತೊಂದರೆಯಾಗಿರುವುದು ಸಭೆಯ ಗಮನಕ್ಕೆ ಬಂದಿರತಕ್ಕ ವಿಚಾರವೇ ಆಗಿದೆ. ಆದ್ದರಿಂದ ಈಗ ಸಮಗ್ರವಾದ ಕಾನೂನು ಸಭೆಯ ಮುಂದೆ ಬಂದಿರುವುದು ಬಹಳ ಕಾಲಾತೀತವಾಗಿ ಬಂದಿದೆ ಎಂದು ಆಗಲೇ ಅರಿಕೆಮಾಡಿಕೊಂಡೆ. ಈ ಮಸೂದೆಯಲ್ಲಿ ಅಡಕವಾಗಿರತಕ್ಕ ತತ್ವಗಳಿಗೆ ಈ ಸಭೆಯು ತನ್ನ ಸಾಮಾನ್ಯ ಬೆಂಬಲವನ್ನು ಕೊಟ್ಟಿದೆ. ಅಲ್ಲಲ್ಲೇ ಈ ಸಭಾಸದರು ಕೆಲವು ಉಪಯುಕ್ತ ಸಲಹೆಗಳನ್ನು ಕೊಟ್ಟಿದ್ದಾರೆ. ಈ ಉಪಯುಕ್ತ ಸಲಹೆಗಳೆಲ್ಲವೂ ಕೂಡ ಜಾಯಿಂಟ್ ಸೆಲೆಕ್ಟ್ ಕಮಿಟಿ ಮುಂದೆ ಬಂದಾಗ ಅವುಗಳೆಲ್ಲವನ್ನು ಪರಿಶೀಲನೆಮಾಡಿ ಎಷ್ಟುಮಟ್ಟಿಗೆ ಅಳವಡಿಸುವುದಕ್ಕೆ ಸಾಧ್ಯವೋ ಅಷ್ಟುಮಟ್ಟಿಗೆ ಅಳವಡಿಸುವುದಕ್ಕೆ ಸಾಧ್ಯತೆ ಇದೆ ಎಂದು ಈ ಸಭೆಯಲ್ಲಿ ಅರಿಕೆಮಾಡಿಕೊಳ್ಳುತ್ತೇನೆ. ಶ್ರೀಮಾನ್ ಸುಂತನ್‌ಕರ್ ಅವರು ಭಾಷಣ ಮಾಡುತ್ತಾ ಈ ಮಸೂದೆ ಪ್ರಗತಿಗೆ ವಿರೋಧವಾಗಿದೆ ಎಂದು ಹೇಳಿದರು. ಇದು ಹೇಗೆ ಪ್ರಗತಿಗೆ ವಿರೋಧವಾಗಿದೆ ಎಂದು ಹೇಳಿದರೋ ನನಗಂತೂ ಅರಿವಾಗಿಲ್ಲ. ಮೈಸೂರು ದೇಶದಲ್ಲಿರತಕ್ಕ ಏಳು ಕಾನೂನುಗಳ ಪೈಕಿ ಎಲ್ಲಾ ಕಾನೂನಿನಲ್ಲಿರತಕ್ಕ ಮುಖ್ಯ ಉಪಯುಕ್ತವಾದ ಅಂಶಗಳನ್ನು ಚುನಾಯಿಸಿಕೊಂಡು ಕರಡು ಮಸೂದೆಯನ್ನು ತಯಾರಿಸಲಾಗಿದೆ. ಬಹುಶಃ ಸುಂತನಕರ್ ಅವರ ಅಭಿಪ್ರಾಯದಲ್ಲಿ ಬೊಂಬಾಯಿ ಮುನಿಸಿಪಲ್ ಬರೋ ಆಕ್ಟನ್ನು ಸಂಪೂರ್ಣವಾಗಿ ಅಲ್ಲಿರುವಂತೆಯೆ ಈ ಮಸೂದೆಯಲ್ಲಿ ಆಳವಡಿಸಿಕೊಂಡು ಈ ಸಭೆಯ ಮುಂದೆ ಇಟ್ಟಿದ್ದರೆ ಸಂತೋಷವಾಗುತ್ತಿತ್ತು ಎಂದು ಕಾಣುತ್ತದೆ. ಆಗ ಇದು ಪ್ರಜಾಪ್ರಭುತ್ವಕ್ಕನುಗುಣವಾಗಿದೆ ಎಂದು ಅವರು ಭಾವನೆ ಮಾಡುತ್ತಾ ಇದ್ದರು ಎಂದು ಅವರ ಭಾಷಣದಿಂದ ಗೊತ್ತಾಗುತ್ತದೆ. ಕಾನೂನುಗಳು ಆಚರಣೆಯಲ್ಲಿದ್ದಾಗ ಆಚರಣೆಯಲ್ಲಿದ್ದಂಥ ಭಾಗದಲ್ಲಿ ಪೌರ ಸಭೆಗಳು ಎಷ್ಟೊಂದು ಪ್ರಗತಿ ಸಾಧಿಸಿವೆ ಎನ್ನುವುದನ್ನು ನಾವು ನೋಡುವುದು ಒಳ್ಳೆಯದು.

ಆ ಕಾಲದಲ್ಲೇ ಮೈಸೂರು ದೇಶದ ನಾನಾ ಭಾಗದಲ್ಲಿ ಪ್ರಜಾಸತ್ತಾತ್ಮಕ ವ್ಯಾಪ್ತಿಗೊಳಪಟ್ಟ ತತ್ವಗಳ ಮೇಲೆ ಆಡಳಿತ ನಡೆಸತಕ್ಕ ಒಂದು ಅವಕಾಶವಿತ್ತು. ಆಗ ಇಲ್ಲಿ ನಡೆಯುತ್ತಿದ್ದ ಆಡಳಿತವನ್ನು ನೋಡಿದ ಮೇಲೆ ಆ ಬೊಂಬಾಯಿ ಡಿಸ್ಟ್ರಿಕ್ಟ್ ಮುನಿಸಿಪಾಲಿಟಿ ಆಕ್ಟಿನಲ್ಲಿ ಹೇಳಿರತಕ್ಕ ಆಡಳಿತ ಮತ್ತು ಬಾಂಬೆ ಬರೋಚ್ ಆಕ್ಟಿನಲ್ಲಿ ಹೇಳಿರತಕ್ಕ ಆಡಳಿತ ಇಲ್ಲಿಯ ಆಡಳಿತಕ್ಕಿಂತ ಉತ್ತಮವಾಗಿರುತ್ತೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ಅಲ್ಲಿರತಕ್ಕ ಜನರಿಗೆ ಅಗತ್ಯವಾಗಿ ಬೇಕಾದ ನಾಗರೀಕರ ಸೌಲಭ್ಯಗಳನ್ನು ಒದಗಿಸಿಕೊಡುವುದಕ್ಕೆ ಅವು ಇನ್ನೂ ಸಾಕಷ್ಟು ಶಕ್ತಿಯುತವಾಗಿಲ್ಲ. ಆದರೆ ಹಳೇ ಮೈಸೂರಿನಲ್ಲಿ ಆ ನಾಗರೀಕ ಸೌಲಭ್ಯಗಳನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಒದಗಿಸುವುದಕ್ಕೆ ಇಲ್ಲಿ ಸಾಕಷ್ಟು ಶಕ್ತಿ ಇತ್ತೆಂದು ಹೇಳುತ್ತೇನೆ. ಈ ದಿವಸ ಈ ಸ್ಥಳೀಯ ಸಂಸ್ಥೆಗಳಿಗೆ ಒಂದು ಹೆಚ್ಚಿನ ಸ್ವಾತಂತ್ರ್ಯವನ್ನು ಕೊಟ್ಟಿಲ್ಲ ಎಂತ ಹೇಳತಕ್ಕದ್ದನ್ನೇ ಒಂದು ದೊಡ್ಡದು ಮಾಡಿ ಮಾತನಾಡಿದ್ದಾರೆ. ಆದರೆ ನಾಗರೀಕರಿಗೆ ಬೇಕಾಗಿರುವುದು ಮುಖ್ಯವಾಗಿ ಸೌಲಭ್ಯಗಳು. ಇಂಥಾ ಸೌಲಭ್ಯಗಳನ್ನು ಯಾವ ಮಟ್ಟದಲ್ಲಿ ಆ ಬರೋಚ ಆಕ್ಟ್ ಒದಗಿಸಿಕೊಡಲಾರದೋ ಆ ಮಟ್ಟದಲ್ಲಿ ನಮ್ಮ ಹಳೇ ಮೈಸೂರಿನ ಕಾನೂನುಗಳು ಒದಗಿಸಿಕೊಟ್ಟಿರುತ್ತವೆ. ನಾನು

ಮೈಸೂರು ಮುನಿಸಿಪಾಲಿಟಿಯಿಂದ ಬರತಕ್ಕವನು. ಆದರೆ ಅಭಿಮಾನಕ್ಕಾಗಿ ನಾನೀಗ ಈ ಮಾತುಗಳನ್ನು ಹೇಳುತ್ತಿಲ್ಲ. ಈ ದಿವಸ ಆ ಮೈಸೂರಿನ ಒಂದು ವಿಚಾರವನ್ನೇ ತೆಗೆದುಕೊಂಡು ಉದಾಹರಣೆಗೆ ಹೇಳುವುದಾದರೆ—ಅಲ್ಲಿಯ ಮುನಿಸಿಪಾಲಿಟಿ ಈ ದಿವಸ ಅಲ್ಲಿಯ ನಾಗರೀಕರಿಗೆ ಬೇಕಾದಷ್ಟು ಸೌಲಭ್ಯಗಳನ್ನು ಒದಗಿಸಿಕೊಟ್ಟಿದೆ. ಅಲ್ಲಿರತಕ್ಕ ಸೌಲಭ್ಯಗಳು ಮುಂದುವರಿದ ಯಾವ ಮುನಿಸಿಪಾಲಿಟಿಗಳಿಗಿಂತಲೂ ಕಡಮೆಯಾಗಿಲ್ಲ. ಇದಕ್ಕೆಲ್ಲ ಮುಖ್ಯ ಕಾರಣ ಆ ಸಂಸ್ಥೆಗೆ ಸರ್ಕಾರದವರು ಎರವಲಾಗಿ ಕೊಟ್ಟಿರತಕ್ಕ ಅಧಿಕಾರಿಗಳೇನಿದ್ದಾರೆ ಅವರು ಅಲ್ಲಿ ಅಷ್ಟು ಮುತವರ್ಜಿಯಿಂದ ಕೆಲಸ ಮಾಡಿರುವುದರಿಂದ ಅಷ್ಟು ಪ್ರಗತಿಯನ್ನು ಅಲ್ಲಿ ಸಾಧಿಸುವುದಕ್ಕೆ ಅವಕಾಶಯಿತು ಎಂಬುದನ್ನು ನಿರ್ಭಯವಾಗಿ ಹೇಳಲೇಬೇಕಾಗಿದೆ. ನಮ್ಮ ಈ ಮುನಿಸಿಪಾಲಿಟಿಗಳಲ್ಲಿ ಕೆಲಸದಲ್ಲಿ ಚೆನ್ನಾಗಿ ತರಬೇತಿ ಹೊಂದಿದ ಅಧಿಕಾರಿಗಳಿರಬೇಕೆಂದು ಏನು ಶ್ರೀಮಾರ್ಕ ಸುಂತನ್‌ಕರ್ ಅವರು ಹೇಳಿದ್ದಾರೋ ಅದೇ ರೀತಿ ಆ ಮೈಸೂರು ಸಿಟಿ ಮುನಿಸಿಪಾಲಿಟಿಯಲ್ಲಿ ಸೀನಿಯರ್ ಐ. ಎ. ಎಸ್. ಆಫೀಸರನ್ನೂ, ನಮ್ಮ P.W.D ಇಲಾಖೆಯ ಇಂಜಿನಿಯರುಗಳನ್ನೂ ಮತ್ತು ಹೆಲ್ತ್ ಡಿಪಾರ್ಟ್‌ಮೆಂಟಿನಿಂದ ನುರಿತ ಹೆಲ್ತ್ ಆಫೀಸರನ್ನೂ—ಹೆಲ್ತ್ ಇನ್ಸ್‌ಪೆಕ್ಟರುಗಳನ್ನೂ ಅಲ್ಲಿಗೆ ಎರವಲಾಗಿ ಕೊಟ್ಟಿದ್ದರಿಂದ ಆ ಅಧಿಕಾರಿಗಳು ತಮ್ಮ ಕಾಲಾವಧಿಯಲ್ಲಿ ಅಲ್ಲಿ ಯಾವ ವಿಧವಾದ ಸ್ಥಳೀಯ ಪ್ರಭಾವಗಳಿಗೂ ಒಳಗಾಗದೆ ಕಾನೂನು ಪ್ರಕಾರ ಕೆಲಸವನ್ನು ನಿಷ್ಠೆಯಿಂದ ಮಾಡಲು ಅವಕಾಶ ಉಂಟಾದ್ದರಿಂದ ಅಲ್ಲಿ ಆ ಕೆಲಸಕಾರ್ಯಗಳು ಅಷ್ಟು ಚೆನ್ನಾಗಿ ನಡೆದಿರುತ್ತವೆ. ಹೀಗಿರುವಾಗ ಈ ವಿಚಾರದಲ್ಲಿ ಈಗ ಏನೊಂದು ದೊಡ್ಡ ಆಕ್ಷೇಪದೋಷವನ್ನೆತ್ತಿದ್ದಾರೆಂದರೆ ಈ ಕೆಲಸಗಳಿಗೆ ಆಯಾಯ ಸ್ಥಳೀಯ ಜನರನ್ನೇ ಈ ಪೌರಸಭೆಗಳಿಗೆ ನೇಮಕ ಮಾಡಿಕೊಳ್ಳಬೇಕು ಎಂಬ ಒಂದು ಟೀಕೆಯನ್ನು ಪ್ರಾರಂಭಿಸಿದ್ದಾರೆ. ಈ ದಿವಸ ಒಬ್ಬ ವ್ಯಕ್ತಿ ಪೌರಸಭೆಯಲ್ಲಿ ಕೆಲಸಕ್ಕೆ ಸೇರಿಬಿಟ್ಟರೆ ಇನ್ನು 30 ವರ್ಷಕಾಲ ಆತ ರಿಟೈರ್ ಆಗೋವರೆಗೂ ಆ ಪೌರ ಸಭೆಯಲ್ಲೇ ಕೆಲಸ ಮಾಡಬೇಕು. ಅಲ್ಲಿಗೆ ಬರತಕ್ಕ ಯಾವ ಅಧಿಕಾರಿಯೇ ಆಗಲಿ ಎಷ್ಟು ದಿವಸ ಇರುತ್ತಾರೆ? ಅವರು ಬದಲಾವಣೆಯಾಗಿ ಅಲ್ಲಿಗೆ ಬೇರೆ ಅಧಿಕಾರಿಗಳು ಬರತಕ್ಕ ಸಂದರ್ಭಗಳಿರುವುದರಿಂದ ಈ ಒಂದೇ ಸ್ಥಳದಲ್ಲಿರತಕ್ಕ ನೌಕರ ಪ್ರಭಾವಕ್ಕೆ ತಕ್ಕಂತೆ ಹೊಸ ಹೊಸದಾಗಿ ಬರತಕ್ಕ ಅಧಿಕಾರಿಗಳು ತಮ್ಮ ನೀತಿಯನ್ನು ಬದಲಾವಣೆ ಮಾಡಿಕೊಂಡು ಕೆಲಸ ಮಾಡಬೇಕಾಗಿದೆ. ಹೀಗೆ ಒಂದೇ ಸ್ಥಳದಲ್ಲಿ ನೌಕರರು ಇರುವುದರಿಂದ ಹೊಸ ಹೊಸ ಸಮಸ್ಯೆಗಳುಂಟಾಗುವುದಕ್ಕೆ ಅವಕಾಶವಿದೆ. ಹಳೇ ಮೈಸೂರಿನಲ್ಲಿ ಹೀಗೆ ಒಂದೇ ಸ್ಥಳದಲ್ಲಿ ಉಳಿದುಕೊಂಡಿರತಕ್ಕ ನೌಕರರಿಂದ ಕೆಲಸ ನಡೆಸಲು ಈಗ ಬಹಳ ಅಡಚಣೆಯುಂಟಾಗಿದೆ. ಆದ್ದರಿಂದ ಈಗ ಈ ಮುನಿಸಿಪಾಲಿಟಿಗಳಿಗೇ ಸೂಟಾಗತಕ್ಕ ಒಂದು ಕೇಡರನ್ನು ಅಂದರೆ ಒಂದು ನೌಕರವರ್ಗವನ್ನು ಮಾಡಬೇಕಾಗಿದೆ. ಈ ನೌಕರವರ್ಗ ಒಂದು ಪೌರಸಭೆಯಿಂದ ಇನ್ನೊಂದು ಪೌರಸಭೆಗೆ ವರ್ಗಾಯಿಸುವುದಕ್ಕೆ ಅವಕಾಶವಿರಬೇಕು ಎಂತ ಹೇಳಿದೆ. ಆದರೆ ಇದು ಶ್ರೀಮಾರ್ಕ ಸುಂತನ್‌ಕರ್ ಅವರಿಗೆ ಹಿಡಿಸುವುದಿಲ್ಲ. ಏಕೆಂದರೆ ಅವರಿಗೆ ಆಯಾಯ ಊರಿನ ಜನರು ಅಲ್ಲಲ್ಲೇ ನೌಕರಿ ಮಾಡಬೇಕು ಎಂಬ ಆಸೆ ಅವರಿಗಿದೆ. ಆದರೆ ಇದರಲ್ಲಿ ಇನ್ನೂ ಒಂದು ವಿಶೇಷವಿದೆ. ಹೀಗೆ ಇವರನ್ನು ಒಂದು ಪೌರಸಭೆಯಿಂದ ಮತ್ತೊಂದು ಪೌರಸಭೆಗೆ ವರ್ಗಾಯಿಸಬೇಕೆಂದು ಹೇಳಿರುವುದರಿಂದ ಆಯಾಯ ಊರಿನಲ್ಲಿರತಕ್ಕ ಜನರಿಗೆ ನೌಕರಿ ಸಿಕ್ಕುವ ಅವಕಾಶಗಳೇನಿವೆ—ಅವು ಕಡಮೆಯೇನೂ ಆಗುವುದಿಲ್ಲ. ಅವರು ಬೇರೆ ಬೇರೆ ಕಡೆಗಳಲ್ಲಿ ಹೋಗಿ ಕೆಲಸ ಮಾಡುವುದಕ್ಕೆ ಅವಕಾಶವಿದ್ದರೆ ಹೆಚ್ಚು ಜನರು ಈ ಕೆಲಸಗಳಿಗೆ ಸೇರಲು ಇನ್ನೂ ಹೆಚ್ಚಿನ ಅವಕಾಶ ದೊರೆತಂತಾಗುತ್ತದೆ. ನಾನು ಆ ಬೆಳಗಾಂ ನಗರದ ಸೌಲಭ್ಯಗಳೇನು ಎಂಬುದನ್ನು ಈಗಾಗಲೇ ನೋಡಿಕೊಂಡು ಬಂದಿದ್ದೇನೆ. ರಸ್ತೆ, ಒಳಚರಂಡಿ, ನೀರು ಸರಬರಾಯಿ, ಈ ವಿಚಾರದಲ್ಲಿ ಅಲ್ಲಿ ಅವರು ಸಾಧಿಸಿರುವ ಆಸ್ತಿತ್ವ—ಪ್ರಗತಿ ಆ ಕಳೆದ 100-150 ವರ್ಷಗಳಿಂದ ಏನಿದೆಯೋ ಅದೆಲ್ಲವನ್ನೂ ನಾನು ಸಮಕ್ಷಮ ನೋಡಿಕೊಂಡು ಬಂದಿದ್ದೇನೆ. ಆದರೆ ಅಲ್ಲಿರತಕ್ಕಂಥ ಕೆಲವು ವ್ಯವಸ್ಥೆಗಳು ಈ ಹಳೇ ಮೈಸೂರಿನಲ್ಲಿ ಅಷ್ಟು ಜಾಸ್ತಿ ಇಲ್ಲದೆ ಹೋದರೂ ಇಲ್ಲಿ ಈ ಅಲ್ಪಕಾಲದಲ್ಲಿ ಸಾಧಿಸಿರತಕ್ಕ ಪ್ರಗತಿ ಒಂದು ಹೆಮ್ಮೆ ಪಡತಕ್ಕದ್ದಾಗಿದೆ. ಹೀಗಿರುವಾಗ ಈಗ ಈ ಕಾನೂನಿನಲ್ಲಿರುವುದೇನು—ಇದರಿಂದ ಪ್ರಗತಿ ಸಾಧಿಸಲು ಪೌರ ಸಭೆಗಳಿಗೆ ಅವಕಾಶವಿದೆಯೇ—ಇಲ್ಲವೇ ಎಂಬುದನ್ನು ಪರಿಶೀಲನೆ ಮಾಡದೆ, ಸದಸ್ಯರು ಇನ್ನೂ ಮುಂದಕ್ಕೆ ಹೋಗಿ ಏನೇನೋ ಹೇಳಿರತಕ್ಕದ್ದು ಅಷ್ಟು ಔಚಿತ್ಯವಾದುದಲ್ಲ ಅನ್ನುವುದನ್ನು ನಾನೀಗ ತಮ್ಮಲ್ಲಿ ಪ್ರಾರ್ಥಿಸಿಕೊಳ್ಳಲು ಇಷ್ಟಪಡುತ್ತೇನೆ.

ಇನ್ನು ಕೆಲವು ಸದಸ್ಯರು ಇನ್ನು ಕೆಲವು ಆಕ್ಷೇಪಣೆಗಳನ್ನೆತ್ತಿ ಈ ಮುನಿಸಿಪಾಲಿಟಿಗಳನ್ನು ಸೂಪರ್‌ಸೀಡ್ ಮಾಡತಕ್ಕದ್ದು ಸರಿಯಲ್ಲ ಎಂದು ಹೇಳಿದ್ದಾರೆ. ಆದರೆ ಈ ಪೌರಸಭೆಗಳ ಆಡಳಿತದ ಮೇಲೆ ಸರ್ಕಾರ ಎಷ್ಟರಮಟ್ಟಿಗೆ ಒಂದು ಅಧಿಕಾರವನ್ನಿಟ್ಟುಕೊಂಡಿರಬೇಕೋ ಅಷ್ಟನ್ನು ಮಾತ್ರ ಇಟ್ಟುಕೊಳ್ಳಲೇಬೇಕು. ಇಲ್ಲವಾದರೆ ಈ ಪೌರಸಭೆಗಳ ಆಡಳಿತ ಪ್ರಭುತ್ವ ರೀತಿ ನೀತಿ

(ಶ್ರೀ ಕೆ. ಪುಟ್ಟಸ್ವಾಮಿ)

ಗನುಸಾರವಾಗಿ ನಡೆಸುವುದಕ್ಕಾಗುವುದಿಲ್ಲ. ಈ ಕಾನೂನು ಪ್ರಕಾರ ಆಡಳಿತ ನಡೆಸುವುದಕ್ಕೆ ಆಗದೆ ಹೋದರೆ ಅಥವಾ ಆಡಳಿತವನ್ನು ದುರುಪಯೋಗಪಡಿಸಿಕೊಂಡರೆ ಅಂಥಾ ಸಂದರ್ಭಗಳಲ್ಲಿ ಅಂಥಾ ಪೌರಸಭೆಗಳನ್ನು ಸೂಪರ್‌ಸೀಡ್ ಮಾಡಿ—ಅವುಗಳ ಆಡಳಿತವನ್ನು ದುರಸ್ತಿ ಮಾಡಲು ಸರ್ಕಾರ ಕೈಹಾಕಬೇಕೆಂತ ಹೇಳಿರತಕ್ಕ ವಿಚಾರದಲ್ಲಿ ಅನೇಕರು ಟೀಕೆ ಮಾಡಿದ್ದಾರೆ. ಈ ವಿಚಾರದಲ್ಲಿ ಮಾನ್ಯ ಸದಸ್ಯರುಗಳಲ್ಲಿ ನಾನು ಅರಿಕೆ ಮಾಡಿಕೊಳ್ಳುವುದಿಷ್ಟೆ. ಆದರೆ ಇದೇನೂ ಅಂಥಾ ಒಂದು ದೊಡ್ಡ ತಪ್ಪಲ್ಲ. ಈ ದಿವಸ ಮೈಸೂರು ರಾಜ್ಯದಲ್ಲಿ 7 ಕಾನೂನುಗಳಿವೆ. ಈ ದಿವಸ ಈ ಏಳು ಕಾನೂನುಗಳಲ್ಲೂ ಈ ಸೂಪರ್‌ಸೀಡ್ ಮಾಡತಕ್ಕ ವಿಚಾರ ಇದ್ದೇ ಇದೆ. ಅದನ್ನೇ ಈಗ ಅಲ್ಲಿಂದ ಎತ್ತಿ ಇದರಲ್ಲಿ ಸೇರಿಸಲಾಗಿದೆ. ಹೀಗೆ ಈ ಹಿಂದೆಯೂ ಈ ಅಧಿಕಾರ ಸರ್ಕಾರಕ್ಕಿತ್ತು ಅಂದ ಮೇಲೆ ಇಲ್ಲಿಯವರೆಗೆ ಸರ್ಕಾರದವರು ಹಾಗೆ ಈ ಅಧಿಕಾರವನ್ನು ದುರುಪಯೋಗಪಡಿಸಿಕೊಂಡು ಎಷ್ಟು ಪೌರಸಭೆಗಳ ಆಡಳಿತವನ್ನೇ ರದ್ದುಮಾಡಿದ್ದಾರೆ? ಎಷ್ಟು ಪೌರಸಭೆಗಳ ಆಡಳಿತವನ್ನು ಕಿತ್ತುಕೊಂಡಿದ್ದಾರೆ? ಸರ್ಕಾರ ಯಾವತ್ತೂ ಈ ಅಧಿಕಾರವನ್ನು ದುರುಪಯೋಗ ಮಾಡಿಕೊಳ್ಳಲು ಪ್ರಯತ್ನಪಟ್ಟಿಲ್ಲ. ಈ ದಿವಸ ಎರಡು ಪುರಸಭೆಗಳ ಆಡಳಿತವನ್ನು ರದ್ದುಮಾಡಿ ಸರ್ಕಾರ ಅವುಗಳ ಆಡಳಿತವನ್ನು ನಡೆಸುತ್ತಿದೆ. ಈ ಪೈಕಿ ಒಂದು ಆ ಸೌದತ್ತಿ ಎಲ್ಲಮ್ಮನ ಮುನಿಸಿಪಾಲಟಿ. ಈ ಮುನಿಸಿಪಾಲಟಿಯವರು ಎಲ್ಲರೂ ಸರ್ವಾನುಮತದಿಂದ ಅಧ್ಯಕ್ಷರೂ ಮತ್ತು ಉಪಾಧ್ಯಕ್ಷರೂ ಸೇರಿ ನಮಗೆ ಇದರ ಆಡಳಿತ ನಡೆಸಲು ಸಾಧ್ಯವಿಲ್ಲ. ಸರ್ಕಾರದವರೇ ಆ ಆಡಳಿತವನ್ನು ವಹಿಸಿಕೊಳ್ಳಬೇಕೆಂದು ಒತ್ತಾಯ ಮಾಡಿದ್ದರಿಂದ ಈಗ ಅಲ್ಲಿರತಕ್ಕ ಲೋಪದೋಷಗಳನ್ನು ತಿದ್ದಿ-ಸರಿಪಡಿಸಿ-ಮತ್ತೆ ಚುನಾವಣೆ ಆಗುವತನಕ ಅದನ್ನೆಲ್ಲ ಸರಿಪಡಿಸಲು ಈಗ ಅಲ್ಲಿಗೆ ಸರ್ಕಾರದ ಅಧಿಕಾರಿಗಳನ್ನು ಹಾಕಿ ಆಡಳಿತವನ್ನು ನಡೆಸಲಾಗುತ್ತಿದೆ. ಇದನ್ನು ಅವರ ಒತ್ತಾಯದ ಮೇಲೆ ಮಾಡಲಾಗಿದೆಯೇವಿನಾ ಸರ್ಕಾರದವರೇನೂ ಒತ್ತಾಯ ಮಾಡಿರುವುದಿಲ್ಲ. ಅವರೇ ಒಂದು ಸರ್ವಾನುಮತದಿಂದ ನಿರ್ಣಯವನ್ನೇ ಪಾಸ್‌ಮಾಡಿ ಕಳುಹಿಸಿದ್ದಾರೆ. ಈಗ 4-5 ತಿಂಗಳಿಂದ ಸರ್ಕಾರದ ಆಡಳಿತದಲ್ಲಿ ಆ ಸಂಸ್ಥೆ ಕೆಲಸ ಮಾಡುತ್ತಿರುವುದರಿಂದ ಅದರ ಆಡಳಿತ ಈಗಾಗಲೇ ಬಹಳ ಮಟ್ಟಿಗೆ ಎಷ್ಟೋ ಸುಧಾರಿಸಿದೆ. ಹೀಗಿರುವಾಗ ಇದನ್ನು ಸೂಪರ್‌ಸೀಡ್ ಮಾಡಿದ್ದಾಗ್ಯೂ ಸರ್ಕಾರದವರ ತಪ್ಪೇನಿದೆ? ಇನ್ನು ಎರಡನೇ ಪುರಸಭೆಯೆಂದರೆ ಅದು ಗದಗ-ಬೆಟಗೇರಿ ವಿಚಾರ. ಈಗ ಈ ವಿಚಾರ ಹೈಕೋರ್ಟಿನ ಮುಂದಿರುವುದರಿಂದ ನಾನು ಇದರ ಬಗ್ಗೆ ಹೆಚ್ಚೇನೂ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಸರ್ಕಾರದವರಿಗೆ ಈ ಅಧಿಕಾರ ಕೊಟ್ಟರೆ ಅವರು ಕೆಲವು ಪೌರಸಭೆಗಳ ಮೇಲೆ ಸೇಡು ತೀರಿಸಿಕೊಳ್ಳಲು ಇದರಿಂದ ಅವಕಾಶವಾಗುತ್ತದೆ ಎಂದು ಹೇಳಿದ್ದರಿಂದ ನಾನೀಗ ಇಷ್ಟೆಲ್ಲವನ್ನೂ ಹೇಳಬೇಕಾಗಿ ಬಂತು.

ದಾವಣಗೆರೆ ಮುನಿಸಿಪಾಲಟಿ ಸಂಬಂಧದಲ್ಲಿ ಒಂದು show-cause ನೀಡಿದ್ದೇವೆ. ಅದಕ್ಕೆ ಅವರ ಉತ್ತರ ಕೊಡುವ ವೇಳೆಯಲ್ಲಿ, ಇನ್ನೂ ಅದು ಪರಿಶೀಲನೆಗೆ ಒಳಗಾಗಿರುವಾಗ ಇವೊತ್ತು ಹೆಚ್ಚೇ ಹೇಳುವುದು ಯುಕ್ತವಾಗಲಾರದು. ಒಂದು ವಿಚಾರವನ್ನು ಮಾತ್ರ ನಾನು ಈ ಸಂದರ್ಭದಲ್ಲಿ ಸ್ಪಷ್ಟಪಡಿಸಬೇಕಾಗಿದೆ. ಯಾವ ಕಾರ್ಯವನ್ನೂ ಕೂಡ ಸರ್ಕಾರ ದುಡುಕಿ ಮಾಡುವುದಿಲ್ಲ. ದಾವಣಗೆರೆ ಪುರಸಭೆ ವಿಚಾರದಲ್ಲಿ ಅನೇಕ ದೂರುಗಳು ಬಂದು, ಆ ದೂರುಗಳನ್ನು ಡೆಪ್ಯುಟಿ ಕಮೀಷನರ ಮೂಲಕ ತನಿಖೆಗೆ ಒಳಪಡಿಸಿ, ಅವರ ರಿಪೋರ್ಟ್ ಬಂದ ಮೇಲೆ, ಆ ರಿಪೋರ್ಟಿನಲ್ಲಿರುವ ಅಂಶಗಳ ಮೇಲೆ ಕೂಡ ಕ್ರಮ ತೆಗೆದುಕೊಳ್ಳಲಿಲ್ಲ. ಅದಕ್ಕೆ ಬೇರೆ ಅಧಿಕಾರಿಯನ್ನು ನೇಮಕ ಮಾಡಿ ಕಳಿಸಿದೆವು. ಆಗ ಅವರು ಯಾರ ಮೇಲೆ ಫಿರ್ಯಾದು ಬಂದಿದೆಯೋ ಅವರನ್ನು ನೋಡಿ, ಅವರಿಂದ ಸಮಜಾಯಿಷಿಯನ್ನು ಪಡೆದು, ಅವರಲ್ಲಿರುವ ರೆಕಾರ್ಡ್‌ಗಳನ್ನು ಪಡೆದು ಒಂದು ರಿಪೋರ್ಟ್ ಮಾಡಿದರು. ಆ ರಿಪೋರ್ಟಿನ ಆಧಾರದ ಮೇಲೆ......

4-30 P.M.

ಶ್ರೀ ವಿ. ಎಂ. ದೇವ್.—ತಮಗೆ ದುರುದ್ದೇಶವಿದೆ ಎಂದು ಹೇಳುತ್ತಿಲ್ಲ. ನಾವು ಹೇಳುವುದೆಂದರೆ independent inspecting authority ಇದ್ದು ಹೇಗೆ ಮಾಡಿದಿರಿ? ದಾವಣಗೆರೆ ಪುರಸಭೆಯ ಮೇಲೆ ಏನೋ ಕ್ರಮ ತೆಗೆದುಕೊಳ್ಳಬಹುದಾಗಿದೆ. ಆ ದೃಷ್ಟಿಯಿಂದ......

ಶ್ರೀ ಕೆ. ಪುಟ್ಟಸ್ವಾಮಿ.—ಹೊಸ ಸದಸ್ಯರು ಯಾರಾದರೂ ಇದ್ದರೆ ಅವರಿಗೆ ಹೇಳಬಹುದು...

Sri K. LAKKAPPA.—Sir, I take a strong exception. Why does the Hon'ble Minister say that they are new members? Does he think that new members have no capacity to remain in the House?

Mr. SPEAKER.—If the Hon'ble Minister who is on his legs does not yield, the Hon'ble Member cannot speak. It is only on a point of order I can hear him.

Sri K. PUTTASWAMY:—I am not yielding, Sir.

Sri G. V. GOWDA.—On a point of order, Sir.

ಮಾನ್ಯ ಮಂತ್ರಿಗಳು ಹೇಳಿದರು, ರಾಜಕೀಯದಲ್ಲಿ ಹೊಸಬರಾದವರಿಗೆ ಆ ಮಾತನ್ನು ಹೇಳಿರಿ, ಎಂದು. ನೀವು ಮೋಸ ಮಾಡುತ್ತಿದ್ದೀರಿ, ನಾನು ಆ ಮೋಸಕ್ಕೆ ಒಳಗಾಗುವುದಕ್ಕೆ ಸಾಧ್ಯವಿಲ್ಲ. ಹೊಸಬರು ಯಾರಾದರೂ ಆದರೆ ಮೋಸ ಹೋಗುತ್ತಾರೆನ್ನುವ ಅರ್ಥದಲ್ಲಿ ಹೇಳಿದ್ದಾರೆ. ಇದು orderನಲ್ಲಿದೆಯೇ ಎಂದು ತಾವು ಪರಿಶೀಲನೆ ಮಾಡಬೇಕು.

Sri K. LAKKAPPA.—In support of the point of order, I would like to say that there are many people outside the Legislature who are capable of understanding things.

Sri V. M. DEO.—Notwithstanding the fact that we just wanted to give nothing but good advice, they do not want to take it, Sir.

Mr. SPEAKER.—I am more than conviced of your *bona fides*.

ಶ್ರೀ ಕೆ. ಪುಟ್ಟಸ್ವಾಮಿ.—ಸ್ವಾಮಿ, ಮಾನ್ಯ ವಿರೋಧಪಕ್ಷದ ಸದಸ್ಯರು ಯಾವ ರೀತಿ ಬೇಕಾದರೂ insinuation ಮಾಡಬಹುದು, ಯಾವುದಾದರೂ ಆರೋಪಣೆಯನ್ನು ಮಾಡಬಹುದು. ಅದನ್ನೆಲ್ಲ ಆಳುವ ಪಕ್ಷದವರು ಕೇಳಬೇಕೆನ್ನುವ ಭಾವನೆಯನ್ನಿಟ್ಟುಕೊಂಡಿದ್ದಾರೆಂದು ಕಾಣುತ್ತದೆ. ಅದು ತಪ್ಪು. ಈ ಸ್ವಲ್ಪ ಹೊತ್ತಿಗೆ ಮುಂಚೆ, ಕೆಲವು ಮಾನ್ಯ ಸದಸ್ಯರು ಹೇಳಿದರು ದಾವಣಗೆರೆ ವಿಚಾರದಲ್ಲಿ ಬೇರೆಯವರು ಬಹಳ ಪ್ರಭಾವ ಬೀರುತ್ತಿದ್ದಾರೆ, ಅವರ ಪ್ರಭಾವಕ್ಕೆ ಒಳಗಾಗಬೇಡಿ ಎಂದು. ನಾನಾದರೂ ಅದಕ್ಕೆ ಹೇಳಿದೆ, ಇದನ್ನೆಲ್ಲ ಹೊಸಬರಾದವರಿಗೆ ಹೇಳಿ. ಅವರಿಗೆ ಇಂಥ warning ಎಚ್ಚರಿಕೆ ಅವಶ್ಯಕವಿದ್ದರೂ ಇರಬಹುದು. ರಾಜಕೀಯ ರಂಗದಲ್ಲಿ ನಮಗೆ ಸಾಕಷ್ಟು ಅನುಭವವಿರುವುದರಿಂದ ನಿಮ್ಮ ಈ ಸಲಹೆ ನನಗೆ ಅನಾವಶ್ಯಕ ಎಂದು ಹೇಳಿದೆ. ಇದರಲ್ಲಿ ಯಾವ insinuation ಇಲ್ಲ. ನನಗೆ ಬಹಳ ಆಶ್ಚರ್ಯವಾಗುತ್ತದೆ. ಸಲಹೆ ಮಾಡುವುದು, advice ಮಾಡುವುದು ನಮಗೆ ಬೇಕಾಗಿಲ್ಲ......

Sri K. LAKKAPPA.—I take to strong objection. The Hon'ble Minister is saying that he is not going to take any advice from the Hon'ble Members. What is this ?

ಶ್ರೀ ಕೆ. ಪುಟ್ಟಸ್ವಾಮಿ.—ಯಾರೋ ಬಹಳ ಜನ ಪ್ರಭಾವ ನಿಮ್ಮ ಮೇಲೆ ಬೀರುತ್ತಿದ್ದಾರೆ, ಆ ಪ್ರಭಾವಕ್ಕೆ ನೀವು ಒಳಗಾಗಬೇಡಿ ಎಂದು ಹೇಳತಕ್ಕ ಸಲಹೆ ಅನಾವಶ್ಯಕ, ಈ ಸಲಹೆಯನ್ನು ಅವರು ಹೇಳಬೇಕಾಗಿಲ್ಲ.

ಶ್ರೀ ವಿ. ಎಂ. ದೇವ್.—ಮಂತ್ರಿಗಳು ಮಾತನಾಡುವುದರಲ್ಲಿ ಅರ್ಥವಿಲ್ಲ. ನಮ್ಮ ಮೇಲೆ ಕಾಳಿತುಕೊಂಡ ಹಾಗೆ ಹೇಳುತ್ತಾರೆ. We can pity him he does not......

Mr. SPEAKER.—I am sure that some body requires pity.

ಶ್ರೀ ಕೆ. ಪುಟ್ಟಸ್ವಾಮಿ.—ಈ ಸಭೆ ಚರ್ಚೆ ಮಾಡುತ್ತಿದ್ದ ವೇಳೆಯಲ್ಲಿ ಇಂಥ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಕೆಲವು ಪುರಸಭೆಗಳಿಗೆ show cause notice ಕೊಟ್ಟದ್ದೇ ತಪ್ಪು ಎಂದು ಹೇಳಿದ್ದಾರೆ. ಆಡಳಿತ ನಡೆಸುವಂತ ವೇಳೆಯಲ್ಲಿ ಕೆಲವು ಪುರಸಭೆಗಳು ಸರಿಯಾದ ರೀತಿಯಲ್ಲಿ ನಡೆಯದೆ ಇದ್ದರೆ, ಸರಿಯಾದ ರೀತಿಯಲ್ಲಿ ನಡೆದಿಲ್ಲವೆನ್ನುವ ದೂರು ನಮ್ಮ ಹತ್ತಿರ ಬಂದಾಗ ಆ ವಿಚಾರದಲ್ಲಿ preliminary enquiry ಕೂಡ ಮಾಡಿ, ಅದರಲ್ಲಿ ಸ್ವಲ್ಪ ಮಟ್ಟಿಗೆ ಸತ್ಯಾಂಶವಿದೆ, prima facie case ಇದೆ ಎಂದು ಗೊತ್ತಾದಾಗ show-cause notice ಕೊಡದೆ ಹೋದರೆ ಕರ್ತವ್ಯಲೋಪವಾಗುತ್ತದೆ.

Sri K. LAKKAPPA.—Will the Hon'ble Minister yield for a minute ? What about Tumkur Municipality ?

Sri K. PUTTASWAMY.—I am not yielding, Sir.

(Sri K. Lakkappa continue to speak)

Mr. SPEAKER.—I will have to direct that every word said by you must be expunged.

Sri G. V. GOWDA.—What about my point of order, Sir?

Mr. SPEAKER.—There is no point of order.

ಶ್ರೀ ಕೆ. ಪುಟ್ಟಸ್ವಾಮಿ.—ವಿರೋಧ ಪಕ್ಷದ ಸದಸ್ಯರೂ, ಆಡಳಿತ ಪಕ್ಷದ ಸದಸ್ಯರೂ ಕೊಟ್ಟಂಥ ಸಲಹೆಗಳಿಗೆ ನಾನಾಗಲೇ ಅಭಿನಂದನೆಗಳನ್ನರ್ಪಿಸಿದ್ದೇನೆ. ತುಮಕೂರು ಪುರಸಭೆಗೆ ಏಕೆ ನೋಟೀಸ್ ಕೊಟ್ಟಿಲ್ಲವೆಂದು ಯಾರೋ ಒಬ್ಬ ಮಾನ್ಯ ಸದಸ್ಯರು ಕೇಳಿದರು......

Sri K. LAKKAPPA.–I take strong exception Sir: he is saying 'ಯಾರೋ ಒಬ್ಬ ಸದಸ್ಯರು' what is the meaning of saying: 'ಯಾರೋ ಒಬ್ಬ ಸದಸ್ಯರು:' With great respect to the Chair, I submit, what is the meaning of the Hon'ble Minister in saying that? Are we not responsible Members of this House?

Mr. SPEAKER.—The Minister is on his legs. The Hon'ble Leader of the Opposition may control his party man. Otherwise, I say that Sri Lakkappa should not disturb hereafter.

ಶ್ರೀ ಕೆ. ಲಕ್ಕಪ್ಪ.—ಯಾರೋ ಒಬ್ಬರು ಸದಸ್ಯರು; 'ಯಾರೋ ಒಬ್ಬರು ಮನುಷ್ಯರು,' ಎಂದು ಹೇಳಿದರೆ ಅದಕ್ಕೆ ಅರ್ಥವೇನು, ಸ್ವಾಮಿ?

ಶ್ರೀ ಕೆ. ಪುಟ್ಟಸ್ವಾಮಿ.—ನಾನು ಮತ್ತೊಮ್ಮೆ ಹೇಳುತ್ತೇನೆ. ನಾನು ಉತ್ತರ ಕೊಡುತ್ತಿದ್ದ ವೇಳೆಯಲ್ಲಿ ಸಭಾಸದಸ್ಯರು ನಿಯಮಗಳಿಗನುಸಾರವಾಗಿ, ಅವಕಾಶವನ್ನು ಪಡೆದುಕೊಳ್ಳದೆ ಹೇಳಿದ ಮಾತುಗಳಿಗೆ ನಾನು ಗಮನ ಕೊಡುತ್ತಿಲ್ಲ. ಸಭೆಯಲ್ಲಿ ಚರ್ಚೆಯಾಗುತ್ತಿದ್ದ ವೇಳೆಯಲ್ಲಿ ಮಾನ್ಯ ಸದಸ್ಯರ ಪೈಕಿ ಒಬ್ಬ ಸದಸ್ಯರು ತುಮಕೂರು ಪುರಸಭೆಯ ವಿಚಾರವಾಗಿ ಪ್ರಸ್ತಾಪ ಮಾಡಿದ್ದು ನನಗೆ ಜ್ಞಾಪಕವಿದೆ. ಅದಕ್ಕೆ ನಾನು ಉತ್ತರ ಕೊಡುತ್ತೇನೆ. ತುಮಕೂರು ಪುರಸಭೆಯ ವಿಚಾರದಲ್ಲಿ ಇದುವರೆಗೂ ಸರ್ಕಾರಕ್ಕೆ ಯಾವುದೂ ಫಿರ್ಯಾದು ಬಂದಿಲ್ಲ. ಬಹುಶಃ ಫಿರ್ಯಾದು ಕೊಟ್ಟಿದ್ದರೆ, ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಆ ವಿಚಾರವನ್ನು ಪರಿಶೀಲನೆ ಮಾಡುತ್ತಿರಬಹುದು. ಡೆಪ್ಯುಟಿ ಕಮೀಷನರು ಆ ವಿಚಾರದಲ್ಲಿ ತನಿಖೆ ಮಾಡಬೇಕು. ಅದರಿಂದ ತನಿಖೆಯಾದ ನಂತರ ಡಿವಿಜನಲ್ ಕಮೀಷನರಿಗೆ ಆ ರಿಪೋರ್ಟ್ ಬರಬೇಕು. ಡಿವಿಜನಲ್ ಕಮಿಷನರು ಅದನ್ನು ಪರಿಶೀಲನೆ ಮಾಡಿ, ಮುಂದೆ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಯೋಗ್ಯವಾಗಿದ್ದ ಪಕ್ಷದಲ್ಲಿ ಅವರು ಸರ್ಕಾರಕ್ಕೆ ಒಂದು ವರದಿಯನ್ನು ಕೊಡುತ್ತಾರೆ. ಸರ್ಕಾರಕ್ಕೆ ಆ ವರದಿ ಬಂದ ನಂತರವೂ ಕೂಡ ಅದು ಪುರಸಭೆಗಳ ಸೆಕ್ರೇಟೇರಿಯಟ್ಟಿನಲ್ಲಿ ಪರಿಶೀಲನೆಯಾದ ಮೇಲೆ ನ್ಯಾಯಶಾಖೆಯ ಅಭಿಪ್ರಾಯವನ್ನು ಪಡೆದು ಆ ನಂತರ show cause notice ವಗೈರೆ ಕೊಡುವುದು. ಆದುದರಿಂದ ಯಾವುದಾದರೂ ಒಂದು ಫಿರ್ಯಾದು ಒಂದು ಪುರಸಭೆಯ ಮೇಲೆ ಇದ್ದ ಮಾತ್ರಕ್ಕೆ ಅದು ನೇರವಾಗಿ ಸರ್ಕಾರಕ್ಕೆ ಬರುತ್ತದೆಂದು ಭಾವಿಸುವುದು ಸರಿಯಾಗುವುದಿಲ್ಲ. ಯಾವ ಸಮಯದಲ್ಲಿ ಬರುತ್ತದೆಂದರೆ ಎಲ್ಲ ಹಂತಗಳಲ್ಲಿಯೂ ಪರಿಶೀಲನೆ ನಡೆದ ಮೇಲೆ, ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಯೋಗ್ಯವಾಗಿದೆ ಎಂದು ತಿಳಿದ ಮೇಲೆ ಬರುತ್ತದೆ. ತುಮಕೂರು ಪುರಸಭೆಗೆ ಸಂಬಂಧ ಯಾವ ಫಿರ್ಯಾದೂ ಇದುವರೆಗೆ ಸರ್ಕಾರದ ಮಟ್ಟಕ್ಕೆ ಬಂದಿಲ್ಲ. ಸರ್ಕಾರದ ಮಟ್ಟಕ್ಕೆ ಫಿರ್ಯಾದು ಬಂದಾಗ ಅದರ ಯೋಗ್ಯತೆಯ ಮೇಲೆ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಸಭೆಗೆ ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

Sri K. LAKKAPPA.—Will the Honb'ble Minister yield for a minute? When the Hon'ble Minister visited that place twice...

Mr. SPEAKER.—If the Hon'ble Member transgresses his limits every time, it will recoil on him.

Sri ANGADI CHANNABASAPPA.—The Minister is not bound to reply to all these points.

ಶ್ರೀ. ಕೆ. ಪುಟ್ಟಸ್ವಾಮಿ.—ಈ ಮಸೂದೆಯಲ್ಲಿ ಅಡಗಿರತಕ್ಕ ಇನ್ನೂ ಹಲವಾರು ಕಲಮುಗಳ ವಿಚಾರದಲ್ಲಿ ಮಾನ್ಯ ಸಭೆಯ ಸದಸ್ಯರು ಅವರ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಇವನ್ನೆಲ್ಲಾ ಜಾಯಿಂಟು ಸೆಲೆಕ್ಟ್ ಕಮಿಟಿಯಲ್ಲಿ ಪರಿಶೀಲನೆ ಮಾಡಿ ಅನಂತರದಲ್ಲಿ ಈ ಸಭೆಗೆ ಆ ಕಮಿಟಿಯಿಂದ ವರದಿ ಪುನಃ ಬರುತ್ತದೆ. ಅಲ್ಲದೇ ಎಷ್ಟೋ ತಿದ್ದುಪಡಿಗಳನ್ನು ಸೂಚಿಸಿದ್ದಾರೆ. ಅವಶ್ಯಕವಿದ್ದ

ತಿದ್ದುಪಡಿಗಳನ್ನು ಬಹುಶಃ ಸೆಲೆಕ್ಟ್ ಕಮಿಟಿಯವರು ಒಪ್ಪಬಹುದು. ಅನಂತರದಲ್ಲಿ ತಿದ್ದುಪಾಟಾದ ಈ ಮಸೂದೆ ಪುನಃ ಈ ಸಭೆಗೆ ಬಂದು ಸರ್ವಸಮ್ಮತವಾದ ಒಂದು ಮಸೂದೆಯನ್ನು ಮಾಡಲು ತಾವೆಲ್ಲರೂ ಒಪ್ಪಬಹುದು, ಸದ್ಯಕ್ಕೆ ಈ ಮಸೂದೆಯನ್ನು ಜಾಯಿಂಟು ಸೆಲೆಕ್ಟು ಕಮಿಟಿಗೆ ಕಳುಹಿಸಿ ಕೊಡಲು ಒಪ್ಪಬೇಕೆಂದು ಈ ಸಭೆಯ ಮಾನ್ಯ ಸದಸ್ಯರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

Mr. SPEAKER.—The question is.

"That the Mysore Municipality Bill, 1962 be taken into consideration."

The motion was adopted.

Motion to refer to a joint Select Committee.

Sri K. PUTTASWAMY (Minister for Municipal Administration).—Sir, I beg to move.

"That the Mysore Municipalities Bill, 1962 be referred to a Joint Select Committee consisting of a total number of 20 members (15 members from the Legislative Assembly and 5 members from the Legislative Council) that the concurrence of the Legislative Council be obtained therefor and that the following members of this House shall be the members of the Joint Select Committee, namely.—

Sriyuts.—

1. Y. Ramachandra
2. M. R. Pattannashetty
3. J. L. Kabadi
4. A. G. Bandi Gowda
5. M. Srinivasa Naik
6. *Smt. B. L. Subbamma*
7. T. G. Satyanarayana
8. M. C. Anjaneya Reddy
9. C. S. Hulkoti
10. K. H. Ranganath
11. B. K. Puttaiah
12. C. J. Muckannappa
13. Siddaiah Kashimath
14. Ghouse Mohiuddin
15. Dr. K. S. Gowdiah

Mr. SPEAKER—Motion moved.

"That the Mysore Municipalities Bill, 1962 be referred to a Joint Select Committee consisting of a total number of 20 members (15 members from the Legislative Assembly and 5 members from the Legislative Council) that the concurrence of the Legislative Council be obtained therefor and that the following members of this House shall be the members of the Joint Select Committee, namely:—

Sriyuts.—

1. Y. Ramachandra
2. M. R. Pattannashetty
3. J. L. Kabadi
4. A. G. Bandi Gowda
5. M. Srinivasa Naik
6. *Smt. B. L. Subbamma*
7. T. G. Satyanarayana
8. M. C. Anjaneya Reddy
9. C. S. Hulkoti
10. K. H. Ranganath
11. B. K. Puttaiah
12. C. J. Muckannappa
13. Siddiah Kashimath
14. Ghouse Mohiuddin
15. Dr. K. S. Gowdiah

The Motion was adopted.

Mr. SPEAKER.—Under sub-clause (2) of rule 240 the Minister in charge and the Minister for Law have to be nominated as Members of the Joint Select Committee and I, accordingly nominate them.

MYSORE GIFT GOODS (UNLAWFUL POSSESSION) BILL, 1963.

Moion to consider.

Sri S. R. KANTHI (Minister for Education).—Sir, I beg to move:

"That the Mysore Gift Goods (Unlawful Possession) Bill, 1963 be taken into consideration.

Mr. SPEAKER.—Motion moved:

"That the Mysore Gift Goods (Unlawful Possession) Bill, 1963, be taken into consideration."